ಅಕ್ಷಯಾಂಬರ ವಿಲಾಸ

ಶ್ರೀ ಗಣಾಧಿಪತಯೇ ನಮಃ
ಶುಭಮಸ್ತು

॥ ಭಾಮಿನಿ ॥

ಹರಿಹರಾಬ್ಜಜಗುಹ ಗಣೇಶರ ।
ತರಣಿ ವಿಧುಕುಜಬುಧಾಸಿತಾದ್ಯರ ।
ಸಿರಿಯ ವಾಣಿಯ ಸರ್ವಮಂಗಳೆಯಡಿಯಸ್ಮರಿಸುತ್ತಾ ॥
ಸುರಪಯಮ ವರುಣಾದಿ ದೇವರ ।
ಹೊರೆದ ಗುರುಪಿತೃಮಾತೃಗಳ ಪದ ।
ಕೆರಗಿ ಮನದಲಿ ನೆನೆದು ಪೇಳ್ದಪೆನೀ ಕಥಾಮೃತವಾ ॥ ೧ ॥

॥ ರಾಗ ಭೈರವಿ ಝಂಪೆತಾಳ ॥

ಕೇಳಿರನುಜಾತರಿರ । ಮಾಲೋಲ ಕರುಣದಿಂ ।
ಬಾಳಿದೆವು ಸುಖದಿಂದ । ಪಾಲಿಸಿದೆವಿಳೆಯಾ ॥ ೧ ॥

ಹರಿಯಕೃಪೆಯಿಲ್ಲದಿರೆ । ಅರಗಿನಾಲಯದೊಳಗೆ ।
ಉರಿದುದಲ್ಲದೆ ಪೆಸರು । ಮರಸದಿಹುದುಂಟೆ ॥ ೨ ॥

ಖಳಹಿಡಿಂಬಾದ್ಯಸುರ । ಕುಲಭೀಮಕೈವಿಡಿದ ।
ಲಲನೆಯು ಘಟೋತ್ಕಚನ । ಬಲವಾಗಲುಂಟೇ ॥ ೩ ॥

ಅಂಗಾರವರ್ಮನೊಲ । ವಂಗೈಸಿ ದ್ರುಪದಜೆಯ ।
ಸಂಗದಿಂದಿನಿತು ಸುಖ । ವಂಗಾಣಲಿಹುದೆ ॥ ೪ ॥

ವಿಪ್ರರುಪಹತಿಗಾಗಿ । ಅಪ್ರತಿಮನರಗಾಯ್ತು ।
ಭೂಪ್ರದಕ್ಷಣೆ ಹರಿಯ । ಸುಪ್ರಸಾದಗಳು ॥ ೫ ॥

ಖಾಂಡವವನ ದಹನ । ಗಾಂಡೀವ ವಾರಣಾ ।
ಖಂಡಲಾದ್ಯರ ವಿಜಯ । ಗೊಂಡೆವಿನ್ನೆನಿತೋ ॥ ೬ ॥

ಸರ್ವರಾಜರಗೆಲಿದು । ಖರ್ವತನಪಡದಿಹೆವು ।
ಉರ್ವಿಕಂಟಕರಳಿವು । ಪರ್ವವಾಯ್ತಲ್ಲಾ ॥ ೭ ॥

ಯಾಗಸುಖದಂತ್ಯವಾ । ಯ್ತೀಗ ಭಾಗ್ಯದೊಳಿಹೆವು ।
ನಾಗಶಯನನ ಲೀಲೆ । ಯಾಗಿಸಿತು ಶುಭವ ॥ ೮ ॥

ಕರುಣನಿಧಿಯನು ಸ್ಮರಿಸಿ । ಮೆರೆವುದೆಮ್ಮುದ್ಯೋಗ ।
ಶರಣರಿಂತೆನುತಾಗ । ಹರುಷದಿಂದಿರಲೂ ॥ ೯ ॥

॥ ಭಾಮಿನಿ ॥

ಇತ್ತ ಗಜಪುರದೊಳಗೆ ಕೌರವ ।
ಪೃಥ್ವಿಪತಿ – ಪಾಂಡವರ ಸಿರಿಗತಿ ।
ಮತ್ಸರಿಸಿತನಗಾದ ಬವಣೆಯ ನೆನೆದು ಮನದೊಳಗೇ ॥
ಕುತ್ಸಿತನು ಮರುಗಿದನುನಾನೀ ।
ಧಾತ್ರಿಯೊಳು ಬಲು ಭಂಡನಾದೆನು ।
ಎತ್ತಪೋಗುವೆನಕಟನುತ ಹಂಬಲಿಸುತಡಿಗಡಿಗೆ ॥ ೧ ॥

॥ ರಾಗ ನೀಲಾಂಬರಿ ರೂಪಕತಾಳ ॥

ಏನೆಸಗಲಿ ಎನಗಿಂತವ । ಮಾನವ ಪಾಂಡವರಿತ್ತರೆ ।
ಜಾಣರ ನೆರವಿಯೊಳೀಮೊಗ । ಕಾಣಿಸಲೆಂತಕಟಾ ॥ ಪ ॥
ನಾನರಿವೆನೆ ಕೃತ್ರಿಮ ಸಂ । ಪೂರ್ಣ ಸಭೆಯ ಮಾಟದ ಬಗೆ ।
ಮಾನವು ಮೇಣಭಿಮಾನವು । ಹಾನಿಯದಾಯ್ತಲ್ಲಾ ॥
ಜಾಣನು ಧರ್ಮಜನನುಜರ । ಹೀನಗುಣವ ಪುಟಕಿಟ್ಟನು ।
ಆ ನರಭೀಮರು ಹೆಚ್ಚಿದ । ರೇ ನೆಂಬೆನು ಹರನೇ ॥ ಏನೆಸಗಲಿ ॥ ೧ ॥

ಏತಕೆ ಮಯಮಂಟಪ ಯಮ । ಜಾತನಿಗಿತ್ತನೊ ನಾರದ ।
ಏತಕೆ ನಕುಲನ ಹಿಂಬಳಿ । ಏತಕೆ ಕೆರಳಿದೆನಲ್ಲಿಗೆ ।
ಏತಕೆ ಭಂಗಗಳಾದುವು । ಏತಕೆ ಪೌರುಷವೂ ॥ ಏನೆಸಗಲಿ ॥ ೨ ॥

॥ ಭಾಮಿನಿ ॥

ಹೇ ಪರೀಕ್ಷಿತ ಜಾತ ಕೇಳೈ ।
ತಾಪಗೊಳುತಲಿ ಮನದಿ ಕುರುಪತಿ ।
ಮಾಪತಿಯ ಸೇವಕರ ಸಿರಿಗತಿಶಯದ ಮತ್ಸರದಿ ॥
ತಾಪಿಸುತ್ತಿರೆ ತಿಳಿದು ಬಂದರು ।
ಭೂಪನೆಡೆಗಾ ರವಿಜ ಸೌಬಲ ।
ರಾಪನಿತು ಪೇಳಿದರು ಶೋಕವ ಬಿಡಿಸಲೆಂದೆನುತ ॥ ೧ ॥

‖ ರಾಗ ಕೇದಾರಗೌಳ ಝಂಪೆತಾಳ ‖

ಅರಸ ಬಿಡು ದುಗುಡವನ್ನು । ಪಾಂಡವರ ಸಿರಿಯ ನಿನಗೊಪ್ಪಿಸುವೆನು ‖
ಪರಿಕಿಸೆನ್ನಧಟ ನೀನು । ನಾನಿರಲು । ಕೊರತೆಯೇಕಯ್ಯ ಇನ್ನು ‖ ೧ ‖

ಬಡಿದು ಭೀಮಾರ್ಜುನರನು । ಸಂಗರದಿ । ಕಡೆಗಾಲ ತೋರ್ಪೆನಿನ್ನು ‖
ಮೃಡನೊಮ್ಮೆ ಬರಲು ಬಿಡೆನು । ನಿರ್ಜರರ । ಪಡೆಗಂಜೆನಯ್ಯ ನಾನು ‖ ೨ ‖

ಒಡೆಯ ಕೇಳ್ ನಿಂದೆಗೈದ । ದ್ರೌಪದಿಯ । ಮುಡಿಯ ಪಿಡಿದೆಳೆದು ಕಂದಾ ‖
ಕಡೆಗೆ ದಾಸೀಕೂಟಕೆ । ಸೇರಿಸುವೆ । ಕಡುಹ ನೀನೋಡ್ವರಾಕೆ ‖ ೩ ‖

‖ ಕಂದ ‖

ಇಂತರ್ಕಜನೆನೆ ಬಳಿಕಂ ।
ಅಂತರ ತಿಳಿದಾಗ ಸೌಬಲನೊರೆದ ನಯದೊಳ್ ‖
ಕೌಂತೇಯರೊಳಾಗದು ಕೇಳ್ ।
ಪಂಥಗಳೀ ವಿಧದಿ ಸಲ್ಲ ಸೈರಿಸೆನುತ್ತಂ ‖ ೧ ‖ ೨೧ ‖

‖ ರಾಗ ಪೀಲು ಅಷ್ಟತಾಳ ‖

ಆಗದಾಗದು ಕುರುರಾಯ । ಕರ್ಣ ।
ನೀಗ ಪೇಳಿದ ಮಾತು ಸರಸವಲ್ಲಯ್ಯ ‖
ಆಗದಾಗದು ಕುರುರಾಯ ‖ ಕಡುಗಲಿಗಳು ಭೀಮಾರ್ಜುನರ ।
ಕೃಷ್ಣ । ಬಿಡದೆ ತಾ ಕಾದಿರ್ಪನಯ್ಯ ಬಲ್ಲಿದರ ‖
ಹುಡುಗಾಟವಪ್ಪುದು ಕಡೆಗೆ । ಬೇಡ । ಬಿಡು
ಪೇಳ್ವೆನಿದಕೊಂದು ಯತ್ನವ ನಿನಗೇ ‖ ಆಗ ‖ ೧ ‖

ಕರೆಸಿಕೊಡಯ್ಯ ಪಾಂಡವರ । ಮತ್ತೆ ।
ಪರಿಕಿಸೆನ್ನಯ ಚಮತ್ಕಾರವ ಕುವರಾ ‖
ಅರೆಕ್ಷಣದೊಳಗವರಸಿರಿಯಾ । ಧರೆ ।
ವೆರಸಿಸೆಳದೀವೆನು ನೋಡು ಸಾಹಸವಾ ‖ ಆಗದಾಗದು ‖ ೨ ‖

ದ್ಯೂತದೊಳವರ ಸೋಲಿಸುವೆ । ಪುರು ।
ಹೂತಾದ್ಯರರಿಯದ ವಿದ್ಯವರಿತಿರುವೆ ‖
ಕೈತವದೊಳು ಗೆಲ್ದು ನಾನು । ಕುಂತಿ ।
ಜಾತರ ನಿನ್ನದಾಸರ ಗೈವೆನಿನ್ನು ‖ ಆಗದಾಗದು ‖ ೩ ‖

ಗುರುಭೀಷ್ಮರಿಂಗರುಹಬೇಡ । ವಿದುರ ।
ನರಿತರೆ ಕೆಡುವುದು ಕಾರ್ಯವು ನೋಡಾ ‖
ತರುಣಿಯ ನಗೆಯ ಮಾಣಿಸುವೆ । ನಿನ್ನ ।
ಸಿರಿಯು ಸಂಪದ ನೋಡಿ ಹರುಷವ ಪಡುವೆ ‖ ಕುರುರಾಯ ‖ ೪ ‖ ೨೫ ‖

॥ ಭಾಮಿನಿ ॥

ಅರಳಿತರಸನ ವದನ ಮನಸಿನ ।
ಕೊರತೆ ಹಿಂಗಿತು ಬಳಿಕ ಮಾವನ ।
ಚರಣಕೆರಗುತಲೆಂದ ಕೇಳೆಮ್ಮವರು ನೀವ್ವೆಸೆ ॥
ಅರುಹಲೇನೆಮ್ಮಖಿಳ ವೈಭವ ।
ಸಿರಿಯು ನಿಮ್ಮಿಂದುಳಿಯಬೇಹುದು ।
ಕರಸೆ ಯತ್ನವದೆಂತು ಖೂಳರ ನಿಲ್ಲಿಗೆಂದೆನಲು ॥ ೧ ॥

॥ ವಾರ್ಧಕ ॥

ಕುರುರಾಯ ನೀನಿದಕೆ ಯೋಚಿಸಿದರೆಂತಹುದು ।
ಅರುಹುವೆನು ನಿನಗೊಂದು ಯುಕ್ತಿಯನು ನಿನ್ನಪಿತ ।
ನಿರುವೆಡೆಗೆ ಪೋಗಿ ಮರುಗುತ್ತ ಪಾಂಡವರನೀ ಕರಸಿಕೊಡದಿರಲು ನಾನು ॥
ಹರಣವನು ಬಿಡುವೆನೆಂದೆನುತ ತಾಪವಗೊಳಲು ।
ಕರೆಸದಿರನಿದಕೆ ಸಂದೇಹವಿಲ್ಲವು ನೀನು ।
ಬರಿದೆ ಹೊತ್ತನು ಕಳೆಯ ಬೇಡೀಗ ಪೋಗೆನಲು ಹರುಷದಿಂ ಪೊರಮಟ್ಟನು ॥

॥ ಕಂದ ॥

ಬಂದಾ ಕೌರವ ಪಿತನಿಗೆ ।
ವಂದಿಸಿ ಬಲು ದುಗುಡದೊಳಿರಲಾಗಂ ಕೇಳ್ದಾ
ಅಂಧ ನೃಪಾಲನು ಕುವರನ ।
ಮುಂದಲೆಪಿಡಿದೆತ್ತಿ ತಳ್ಕಿಸಿಯೊರೆವನಾಗಂ ॥ ೧ ॥

॥ ರಾಗ ಮಧ್ಯಮಾವತಿ ತ್ರಿವುಡೆತಾಳ ॥

ಕಂದ ಬಾರೆನ್ನ ಭಾಗ್ಯದ । ಕಂದೆರವೆ ನೀನಧಿಕ ದುಗುಡದಿ ।
ನೊಂದಿರುವೆ ಎಂದೆಂಬುದರಿತೆನು ।
ಮಂದಿಗಳ ಮುಖದಿಂದಲಿ । ಏನಿದೇನು ॥ ೧ ॥

ಸಾಕು ಬಿಡು ಬಿಡು ಮನದ ದುಗುಡವ ।
ನೂಕಿಕಳೆ ಪೇಳೆನ್ನೊಳ್ಪಿನ್ನಯ । ವ್ಯಾಕುಲವನೆಂದೆನಲು ಪೇಳ್ದನು ।
ಆ ಕುಮಾರನು ಮರುಗುತ । ತಾತನೊಡನೆ ॥ ೨ ॥ ೩೦ ॥

॥ ರಾಗ ಕಾಂಭೋಜಿ ಏಕತಾಳ ॥

ಲಾಲಿಸು ತಾತನೆ ಪೇಳುವ ನುಡಿಯ ।
ಜಾಲ ಮಾತಲ್ಲವೈ ಬಂದಿಹ ವ್ಯಥೆಯ ॥ ಪ ॥

Scanned by CamScanner

ನಿನ್ನ ಮೋಹದ ಕಂದ ನಾ ಯುಧಿಷ್ಠಿರನು ।
ಎನ್ನ ಮಾನವ ಸೂರೆಗೊಂಡ ಬಗೆಯನು ॥
ಘನ್ನಘಾತಕಿಗಳು ಗೈದ ಹಾಸ್ಯವನು ।
ಕಣ್ಣಾರೆ ಕಂಡರೇನೆಂಬೆಯೊ ನೀನು ।
ಭಯವಪ್ಪುದೆನಗೆ ನಿನ್ನೊಡನೆಂಬುದೇನು ॥ ಲಾಲಿಸು ॥ ೧ ॥

ನೆಲಜಲ ಭೇದವಿಲ್ಲದ ಸ್ಥಳದಲ್ಲಿ ।
ತಿಳಿಯಾದೆ ನನೆದೆನಂಬರವೆತ್ತಲಲ್ಲಿ ॥
ಲಲನೆ ಪಾಂಚಾಲೆಯು । ಕೈತಟ್ಟಿ ನಗಲು ।
ಉಳಿದುದೇನಯ್ಯ ಎನ್ನಯ ಮಾನವೇಳೂ ॥ ಲಾಲಿಸು ತಾತ ॥ ೨ ॥

॥ ಭಾಮಿನಿ ॥

ಜನಕ ಕೇಳವಮಾನ ಹೊಂದಿದ ।
ತನುಪಿಡಿದು ಬಾಳಿರೆನು ಎಂದಿಗು ।
ಜನರಿಗೀ ಮೊಗದೋರೆ ನಾಚಿಕೆಯಪ್ಪುದದರಿಂದಾ ॥
ಎನಗೆಕೊಡು ಮರಣಕ್ಕೆ ನೇಮವ ।
ನೆನಲು ಮನಮರುಗುತ್ತಲಂಧನು ।
ತನಯಗೆಂದನು ಪುತ್ರ ಮೋಹದ ಪಾಶಕೊಳಗಾಗೀ ॥ ೧ ॥ ೩೪ ॥

॥ ಸಾಂಗತ್ಯ ರೂಪಕತಾಳ ॥

ಆಗಲಿ ನಿನ್ನಭಿಮತವೇನು ಪೇಳೆನ್ನೊ ।
ಈಗ ನಾ ಕೇಳುವೆನದರ ॥
ಆಗು ಹೋಗುಗಳೆಲ್ಲ ಹರಿ ಇಚ್ಛೆಯೆನಲು ।
ಕೇಳ್ದಾಗಲಿಂತೆಂದ ಕೌರವನು ॥ ೧ ॥

ಕರಸಿಕೊಡೀಗೆಮ್ಮ ಪುರಕೆ ಪಾಂಡವರನ್ನು ।
ಪರಿಕಿಸ ಮೇಲೆಮ್ಮ ಬಗೆಯಾ ॥
ವಿರಚಿಸಿ ಕೈತವ ದ್ಯೂತವ ನಾನಪ ।
ಹರಿಸುವೆನವರ ಸಂಪದವ ॥ ೨ ॥

ದುರುಳದುರ್ಮತಿಯೆ ನಿನ್ನಿಂದ ಕೆಟ್ಟಿತು ನಮ್ಮ ।
ಭರತ ಕುಲವು ಪೇಳ್ವುದೇನು ॥
ವರಸತ್ಯನಿಧಿಗಳಾ ತರಳರ ಕೆಡಿಸುವ ।
ಪರಿಗೇಕೆ ಹೇಸದೈ ಮನವು ॥ ೩ ॥

ಈಸು ಸಹಾಯವ ಮಾಡಬೇಕಯ್ಯ ನ ।
ಮ್ಮಾಸೆ ಇಲ್ಲವೆ ಪುತ್ರರೆಂದು ॥

Scanned by CamScanner

ದೋಷವೇನಿರ್ದರು ಇರಲೆಮಗೆಂದು ಭೂ।
ಮೀಶನಂಘ್ರಿಗೆಯೆರಗಿದನು ॥ ೪ ॥ ೩೮ ॥

॥ ಭಾಮಿನಿ ॥

ಅರಸ ಜನಮೇಜಯನೆ ಕೇಳ್ ಖಳ।
ರೆರೆಯನಾಡಿದ ನುಡಿಗೆ ಮನದಲಿ।
ಮರುಗುತಂಥ ನೃಪಾಲ ಸಿಲುಕಿದ ಪುತ್ರ ಮೋಹದಲಿ ॥
ದುರಿತಕಂಜದೆನುಡಿದನಣುಗಗೆ।
ಕೊರತೆ ಬಿಡು ವಿದುರನನು ಕಳುಹಿಸಿ।
ಕರೆಸುವೆನು ಪಾಂಡವರನೆನಲೆಂದನುಸುಯೋಧನನು ॥ ೧ ॥

॥ ವಾರ್ಧಕ ॥

ತಾತ ಲಾಲಿಸು ವಿದುರನಿಂಗೆಮ್ಮ ಮೇಲೆ ಸಂ।
ಪ್ರೀತಿ ಇಲ್ಲನವರತ ಪಾಂಡವರ ಪಕ್ಷದವ।
ನಾತಗರುಹಿದರೆಮ್ಮ ಕಾರ್ಯಕೈಗೂಡದೆನಲೆಂದನಾ ಧೃತರಾಷ್ಟ್ರನು ॥
ಆ ತರಳರಿಂಗಾತ ಹಿತವಂತನಾದರೇನ್।
ರೀತಿ ಬೇರೊಂದಿಹುದು ಕರೆಸುವೆನು ನಿನಗದರ।
ಭೀತಿ ಬೇಡೀಗ ನೀಕರೆಸಿ ಶಿಲ್ಪಿಗರಿಂದ ಕಟ್ಟಿಸೈ ಮಂಟಪವನು ॥ ೧ ॥ ೪೦ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಏನೆಹಸಾದವೆನುತ್ತ ಕುರುಪತಿ। ಇನಜಸುಬಲಾತ್ಮಜರಿಗೆಂದನು।
ನೆನೆದ ಕಾರ್ಯವಿದಾಯ್ತು ಎನ್ನಯ। ಜನಕನಿಂದ ॥ ೧ ॥

ಎನುತ ಹಿಗ್ಗುತಲಾಗ ಶಿಲ್ಪಿಗ। ರನುಕರೆಸಿ ಕಟ್ಟಿಸಿದ ಮಂಟಪ।
ವನು ಸುರೇಂದ್ರನ ಸಭೆಗೆ ಮಿಗಿಲೆಂ। ದೆನುವ ತೆರದಿ ॥ ೨ ॥

ಇತ್ತಲಂಥನರೇಂದ್ರ ವಿದುರನ। ಹತ್ತಿರಕೆ ಕರೆದೆಂದ ನೀ ಪೋ।
ಗುತ್ತಮನೆ ಪಾಂಡವರ ಬಳಿಗತಿ ಉತ್ಸಪದೊಳು ॥ ೩ ॥

ಕರದು ತಾ ನೀನಾ ಕುಮಾರರ। ನಿರದೆ ನಮ್ಮೀಪುರಕೆ ಶೀಘ್ರದಿ।
ಇರಲಿ ಇವರವರೊಂದುಗೂಡುತ। ಪರಮ ಸುಖದಿ ॥ ೪ ॥

ನೂತನದಿ ಕಟ್ಟಿಸಿದ ಸಭೆಯೊಳ। ಗಾತಗಳು ನಮ್ಮವರು ಕೂಡುತ।
ಪ್ರೀತಿಯಿಂದಲಿ ಆಡಲೈ ಸುಖ। ದ್ಯೂತವನ್ನು ॥ ೫ ॥ ೪೫ ॥

॥ ರಾಗ ಕೇದಾರಗೌಳ ಅಷ್ಟತಾಳ ॥

ಎಂದಡೆಂದನು ಮನ। ನೊಂದು ತಾ ವಿದುರನು। ಅಂಧಕ ನೃಪತಿಗಾಗ ॥
ಕೊಂದೆನೀ ನಿನ್ನಯ ನಂದನರನು ಕಾರ್ಯ। ಹೊಂದಗೊಡದು ಮನಕೆ ॥ ೧ ॥

Scanned by CamScanner

ಮೊದಲಿದು ಸು ದ್ಯೂತ । ತುದಿಗೆ ವಿಷಮವಹು । ದಿದರ ನಾನರಿತಿರುವೆ ॥
ಒದಗಿಬಹುದು ನಾಶ । ದುದಯ ನಿನ್ನವರಿಗೆ । ಇದಕೆ ನಾನೇನೆಂಬೆನು ॥ ೨ ॥

ಮರುಳಾಗಿ ಮಕ್ಕಳ ಮಾತಿಗೆ ಫಲುಗುಣ । ಮರುತಜರನುಕೆಣಕಿ ॥
ಕುರುಕುಲನಾಶದ ಬೀಜ ಬಿತ್ತದಿರೀಗ । ಸರಿಯಲ್ಲ ಸಾರಿದೆನು ॥ ೩ ॥

॥ ಭಾಮಿನಿ ॥

ವಿದುರ ಬೆಂಬೀಳದಿರು ಕಾರ್ಯದ ।
ಪದನ ಬಲ್ಲೆನು ಪಾಂಡುತನಯರ ।
ಮುದವ ಬಯಸುವೆನಲ್ಲದೇ ಮುನಿದಪನೆ ತರಳರಿಗೆ ॥
ಇದು ಮಹಾಸಭೆಯಲ್ಲಿ ಮೇಳಾ ।
ಪದಲಿ ಕುರುಪಾಂಡವರು ಸದ್ದ್ಯೂ ।
ತದಲಿರಮಿಸಿದರೇನು ಕೇಡಿದರಲ್ಲಿ ಪೇಳೆಂದಾ ॥ ೧ ॥

ಕರೆದು ತಾನೀನವರ ನಾನುಪ ।
ಚರಿಸುವಂದವ ನೋಡು ನಿನ್ನಂ ।
ತರಕೆ ಸರಿಬಾರದಿರೆ ನೀ ಮತ್ತಾಡು ಮಾತುಗಳ ॥
ದುರುಳರವರಿವರೆಂಬುದರನಾ ।
ದರಿಸದಿರು ನೀ ಪೋಗು ಪಾಂಡವ ।
ತರಳರನು ಒಡಗೊಂಡು ಬಾರೆಂದರುಹಿ ಕಳುಹಿಸಲು ॥ ೨ ॥

॥ ರಾಗ ಕೇದಾರಗೌಳ ಅಷ್ಟತಾಳ ॥

ಧೃತರಾಷ್ಟ್ರನೊರೆದುದ । ಮತಿಯೊಳಾಲೋಚಿಸಿ । ವ್ಯಥಿಸುತ್ತವಿದುರನಂದು ॥
ಹತಭಾಗ್ಯರಿಗೆ ನಯನೀತಿಯ ಪೇಳ್ದರೆ । ಹಿತವಾಗದೆಂದೆನುತಾ ॥ ೧ ॥

ಜವದೊಳೈದಿದ ನಿಂದ್ರ । ಭವನದಂತೊಪ್ಪುವ । ರವಿಪೌತ್ರನಾಲಯಕೇ ॥
ತವಕದಿ ಕಂಡು ಪಾಂಡವರಿದಿರ್ಗೊಂಡರು । ವಿವಿಧುಪಚಾರಗೈಯ್ದು ॥ ೨ ॥

ಕ್ಷೇಮವೆ ಭೀಷ್ಮಾದಿ ಗುರುಗಳೆಲ್ಲರಿಗೆ ಸು । ಪ್ರೇಮವೆ ಹಿರಿಯರಿಗೆ ॥
ಕ್ಷೇಮವೆ ಕೌರವಾದ್ಯರಿಗೆ ತೋಷವೆ ನಾರಿ । ಸ್ತೋಮಕೆಂದೆನೆ ಭೀಮನು ॥ ೩ ॥

ವಿಷದನ್ನವುಣಿಸಿದ । ಲಾಕ್ಷಾಗೃಹದೊಳಿಟ್ಟ । ಅಸುರ ಕರ್ಮಿಯು ಕೌರವ ॥
ಅಸುರಾಂತಕನ ದಯ । ಉಳಿಸಿತೆಮ್ಮುವನಿನ್ನೇ । ನೆಸಗ್ವನೊಹಗೆಗಳಂತೆ ॥ ೪ ॥

ಜೀಯ ಬಿನ್ನಹ ದುಃಖ । ದಾಯಕನಾ ಕುರು । ರಾಯನಾಪ್ತರ ತಂತ್ರದೀ ॥
ಆಯುರಾರೋಗ್ಯದೊಳಿಹನೆ ಮತ್ಸರದೊಳು । ನೋಯಿಸಲಿಪನೊಯೇನೊ ॥ ೫ ॥

ಯಮುಜಗಿತ್ತಾಮಯ । ಸಭೆಯ ಕಂಡಾ ಚಿತ್ತ । ಭ್ರಮೆಯೊಳೈದಿದಕೌರವ ॥
ಸಮುತೆಯೊಳೈಕ್ಯದೊ । ಳಿರುವಂತೆ ಕರುಣೆಯ । ಕಮಲಾಕ್ಷ ನೀಯಲೆಂಬೆ ॥ ೬ ॥

Scanned by CamScanner

ಇತ್ತ ನೀವೈತಂದ । ಕೃತ್ಯವದಾವುದು । ಬಿತ್ತರಿಪುದು ಎನುತ ॥
ಮಿತ್ರಜಸುತ ಕೇಳೆ । ಅರ್ತಿಯಿಂ ವಿದುರನು । ಚಿತ್ತ ಶುದ್ಧಿಯೊಳೆಂದನೂ ॥ ೭ ॥ ೫೭ ॥

॥ ರಾಗ ಕಮಾಚು ಏಕತಾಳ ॥

ಕಿರಿಯರ ಕೂಡೆ ನೀನಾಪುರಕೀದಿನ । ಬರಲು ಬೇಕಂತೆ ರಾಜ ॥
ಕರೆಯಲಟ್ಟಿದನೆನ್ನ । ಅರಿತುಕೊ ಕೌರವಾದ್ಯರಗುಣವರ್ತನವ ॥ ೧ ॥

ರಾಜಸೂಯಾಧ್ವರದೊಳು ನಿನಗೊದಗಿದ । ರಾಜತೇಜವನೋಡಿದ ॥
ರಾಜಕುಲಾಂಗಾರ । ಸೋಜಿಗದಲಿ ಮನ । ಮಾಜದೆ ಕರಗುವನು ॥ ೨ ॥

ಪರಿಕಿಸಿ ಶಕುನಿಯಾ । ದೊರೆಗೆ ಪೇಳಿದ ಧೈರ್ಯ । ವೆರಸಿ ಜೂಜಿನ ಮುಖದಿ ॥
ಸಿರಿಯಸೆಳೆದು ಪಾಂಡು । ಜರನೂಕಿ ಬಲು ಭಂಗ । ಬರಿಸುವೆನೆಂದೊರೆದ ॥ ೩ ॥

ಛಲದಂಕ ಕೌರವ ಬಿಡದಯ್ಯಗೊರೆದನು । ಬಳಿಕೆನ್ನ ಧೃತರಾಷ್ಟ್ರನು ॥
ಕಳುಹಿದ ಸುತರ ವ್ಯಾಮೋಹವ ಮೀರಲಾ । ರ್ಗಳವು ನೀನಿದ ಯೋಚಿಸು ॥ ೪ ॥

॥ ಭಾಮಿನಿ ॥

ವಿದುರದೇವ ಹಸಾದವೆಮಗದು ।
ವಿಧಿಯಮೀರಲದೆಂತು ಭಾಗ್ಯದ ।
ತುದಿಮೊದಲ ಕಂಡಿಲ್ಲ ಬೊಪ್ಪನ ಮತವಲೇಸೆಮಗೇ ॥
ಹದುಳದಲಿ ನಾ ಬಹೆನು ಸೌಬಲ ।
ನೊದಗಿ ದ್ಯೂತವ ನಾಡಿ ಭೂಮಿಪ ।
ನಿದಿರಿನಲಿ ಗೆಲಲೆನ್ನ ಪೂರ್ವಾರ್ಜಿತವ ಮೀರುವೆನೆ ॥ ೧ ॥

॥ ಸಾಂಗತ್ಯ ರೂಪಕತಾಳ ॥

ಕರ್ಣಜಯದ್ರಥಾದ್ಯರು ಕುಜನರು ತಿರು ।
ಗನ್ನಡಿ ಬೊಪ್ಪನ ಮನವು ॥
ಇನ್ನು ನಿಷ್ಫಲ ವಿಧಾನರು ಭೀಷ್ಮದ್ರೋಣಾದ್ಯ ।
ರೆನ್ನಲು ಮಗುಳೆಂದಯಮಜ ॥ ೧ ॥

ಅರಿತಿಹೆನಾ ಕೌರವನ ಮಂತ್ರಾಲೋಚನೆ ।
ಮೆರೆವುದು ಕರ್ಣಾದ್ಯರಿಂದ ॥
ಹೊರಗಿಹರಾ ಭೀಷ್ಮಾದ್ಯರು ನೋಡೆದರ್ಪಣ ।
ದಿರವು ಬೊಪ್ಪನ ಬಗೆ ಎಂದು ॥ ೨ ॥

ಆದರೆ ಸೋದರಾದ್ಯರ ಕೇಳಿ ನಿಶ್ಚೈಸಿ ।
ಸಾಧಿಪುದೆನುತೋಲಗದೊಳು ॥
ಸಾದರದಿಂದ ಪೋಪುದೊ ಪೋಗದಿರ್ಪುದೊ ।
ಭೇದವಿಲ್ಲದೆ ಪೇಳಿರೆಂದ ॥ ೩ ॥ ೬೫ ॥

॥ ರಾಗ ಖಮಾಚ್ ಏಕತಾಳ ॥

ಏನೆನ್ನಲೀ ಬಗೆಗೆ । ಧರ್ಮಜನೇ ಏನೆನ್ನಲೀ ಬಗೆಗೆ ॥ ಪ ॥
ಏನಿನ್ನು ಸತ್ಯಾಸತ್ಯ । ಕಾಣಲೊಂದೆ ಮಾರ್ಗವಲ್ಲ ।
ಜ್ಞಾನಿಯ ವಿಧಾನವೆಲ್ಲ । ಹಾನಿಯಲ್ತೆ ದುಷ್ಟರಲ್ಲಿ ॥
ಏನೆನ್ನಲೀ ಬಗೆಗೆ ॥ ಏನೆನ್ನಲೀ ॥ ನಮ್ಮಯಾಗಭೋಗನೋಡಿ ॥ ೧ ॥

ಒಮ್ಮೆ ಕರೆದು ಗೆಲುವ ಕಾರ್ಯ । ಧರ್ಮವೆಂದು ಸಾರಲಲ್ಲಿ ।
ಧರ್ಮಾಧರ್ಮಾನೋಳ್ಪರಾರು ॥ ಏನೆನ್ನಲಿ
ನಿಮ್ಮ ನೆರಳಸೇರಿ ಬಾಳ್ಪ । ನಮ್ಮಗಂಡು ನಡೆವುದೆಂತು ।
ಒಮ್ಮೆ ಪೂರ್ವಾಪರವ ನೋಡಿ ।
ಕರ್ಮಮಾಳ್ಪುದೆಂದ ಭೀಮ ॥ ಏನೆನ್ನಲೀ ಬಗೆಗೇ ॥ ೨ ॥

॥ ರಾಗ ಕಲ್ಯಾಣಿ ಏಕತಾಳ ॥

ಕೇಳಿರೆಲ್ಲಾ ॥ ಕೇಳಿ ಮಾತಹಿತ ।
ತಾಳಿದೆ ಕಳವಳ । ಜಾಲವಲ್ಲ ಪಿತ । ಹೇಳಿದ ಬರಲು ॥ ಪ ॥
ದುರುಳರು ಪ್ರಾಜ್ಞರ ।
ನರಿವರೆ ಸರ್ವಥ । ತೊರೆವರು ಜೀವವ । ಬರಿದೇಕಂಜಿಕೆ ॥
ಗುರುಹಿರಿಯರಹಿತ । ಮೆರೆವ ನಮ್ಮಸೋ ।
ದರರ ಸೀಮೆಗೆ । ತೆರಳುವುದುಚಿತ ॥ ಕೇಳಿ ॥ ೧ ॥

ಯಿಡಕದಿರದು । ಕಂಡೊಡೆ ಮೇಲೀಬಗೆ ।
ಬಡವಗೆಡರತಂದಿಡಲಪ್ಪುದೆ ಸುಖ ॥
ದಡಿಗರಾದರೇ । ನೊಡೆಯನ ದಯವಿರೆ ।
ಕೆಡುಕು ತೊಡಕು ಆ । ಕಡೆಯೊಳಾಗದೈ ॥ ಕೇಳಿ ॥ ೨ ॥

॥ ರಾಗ ಕಾಂಭೋಜಿ ಏಕತಾಳ ॥

ನಿನ್ನನುಡಿ ಸತ್ಯನುಡಿ । ನಿನ್ನನಡೆ ಧರ್ಮಗೆಡೆ ।
ಚೆನ್ನಾಯ್ತು ಘೋಷಮಾ । ಸನ್ನ ಸುಖವಿರಲೂ ॥
ಮುನ್ನಪೊರಟಪೆವು ನಡೆ । ಬನ್ನಬರಲೇಕೆ ಭಯ ।
ವೆನ್ನುತಲೆ ಸಿದ್ಧರಾದರು । ಹರಿಯನೆನೆದೂ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಆದುದಾಗಲಿ ಪೋಪನಾವೆಂ । ದಾದಯಾ ನಿಧಿ ಧರ್ಮತನಯನು ।
ಸೋದರರ ಸತಿಸಹಿತ ಸಕಲರ । ಮೋದದಿಂದಾ ॥ ೧ ॥

Scanned by CamScanner

ಕೂಡಿಕೊಂಡಾ ವಿದುರ ಸಹಿತಲಿ ॥ ಗಾಢದಿಂದೈತರಲು ಮಾರ್ಗದಿ ।
ನೋಡಿದರು ದುಃಶಕುನಗಳನೆಲೆ । ರೂಢಿಪಾಲ ॥ ೨ ॥ ೭೦ ॥

॥ ಭಾಮಿನಿ ॥

ಪೊಡವಿಪತಿ ಕೇಳ್ ಸುಜ್ಞರಾಡಿದ ।
ನುಡಿ ಮನಕೆ ಸರಿಬಾರದೀಪ್ಪರ್ಗದೆ ।
ಕೆಡುವ ಕಾಲಕ್ಕೆಂಬ ನಾಣ್ನುಡಿ ಸತ್ಯವಾದುದಲ ॥
ನುಡಿದ ವಿದುರನ ಮಾತ ಕೇಳದೆ ।
ಪಡೆ ಸಹಿತ ನಡೆತಂದು ಧರ್ಮಜ ।
ನೊಡನೆ ಪೊಕ್ಕನು ಹಸ್ತಿನಾಪುರಕೇನ ಪೇಳುವೆನು ॥ ೧ ॥ ೭೨ ॥

॥ ಸಾಂಗತ್ಯ ರೂಪಕತಾಳ ॥

ಬರವ ಕೇಳ್ದಂಥ ನೃಪಾಲನು ಹರುಷದಿ ।
ಕರೆಸಿ ತನ್ನಯ ಮಂದಿರಕ್ಕೆ ॥
ಪರಿಪರಿಯಿಂದುಪಚರಿಸುತ್ತ ಕೇಳಿದ ।
ನಿರದೆ ಸುಕ್ಷೇಮ ಸಂಗತಿಯ ॥ ೧ ॥

ಬಳಿಕ ಗಾಂಧಾರಿಯು ಹರುಷದಿ ದ್ರೌಪದಿ ।
ಜಲಜಾಕ್ಷನನುಜೆ ಮುಂತಾದ ॥
ಲಲನೆಯರೆಲ್ಲರನುಚಿತೋಕ್ತಿಯಲಿ ಮತ್ತೆ ।
ಸಲೆಮನ್ನಿಸಿದಳು ಸಂಭ್ರಮದಿ ॥ ೨ ॥

ಖಳಕುರುಪತಿಯಿತ್ತ ರವಿಜ ಸೌಬಲದು ।
ಶ್ಶಳೆ ಪತಿದುಶ್ಶಾಸನರನೂ ॥
ಗೆಲವಿಂದ ಕೂಡಿಕೊಂಡೆಂದನು ನಮ್ಮಯ ।
ಬಲೆಗೆ ಬಿದ್ದವು ಪುಲಿಗಳೈದು ॥ ೩ ॥

ಗೆಲುವ ಯತ್ನವು ಇನ್ನು ಇಹುದೆಮ್ಮ ಮಾವ ಸೌ ।
ಬಲನೊಳಗೆಂದೆನಲವನು ॥
ಘಳಿಗೆಯೊಂದರಲಿ ನಿನ್ನೊಶಗೈವೆನವರನ್ನು ।
ತಳುವದೆಕರೆತಾರೆಂದೆನಲು ॥ ೪ ॥ ೭೬ ॥

॥ ವಾರ್ಧಕ ॥

ಉತ್ತರೆಯ ಸುತಸುತನೆ ಕೇಳ್ಬಳಿಕ ಕುರುಪತಿಯು ।
ಅರ್ತಿಯಿಂದೈದಿ ಪಿತನಡಿಗೆರಗಿ ಪೇಳಿದಂ ॥
ಉತ್ತಮ ಸಭಾ ಸೊಬಗನಿವರೀಕ್ಷಿಸಲಿಯೆನಲು ನಸುನಗುತಲಂಧನೃಪತಿ ॥

Scanned by CamScanner

ಕೃತ್ರಿಮವ ತೋರ್ಗೊಡದೆ ಕರತಂದನೈವರನು ।
ಎತ್ತಬಲ್ಲನು ಧೂರ್ತರೆಸಗಿರುವ ಕಪಟವನು ।
ಸತ್ಯನಿಧಿ ಧರ್ಮಸುತನಕಟ ಪಾಪಿಗಳೇನಗೈವರೆಂದರಿವರಾರು ॥ ೧ ॥ ೭೭ ॥

॥ ಭಾಮಿನಿ ॥

ಧಾರಿಣಿಪ ಕೇಳ್ ಧರ್ಮಜಾತಗೆ ।
ಕೌರವೇಶ್ವರ ಸಭೆಯ ವಿಭವವ ।
ತೋರಿಸುತ ಮುಂದೈತರಲು ಬಳಿಕಲ್ಲಿ ರಂಜಿಸುವ ॥
ಚಾರುಹಾಸಂಗಿಗಳ ಲೆತ್ತದ ।
ಸಾರಿ ಕಾಯ್ಗಳ ತೋರಿ ನುಡಿದನು ।
ಭೂರಿ ಪ್ರೇಮವು ತೋರುವಂದದೊಳಕಟ ದುರ್ಮತಿಯು ॥ ೧ ॥

॥ ರಾಗ ಕೇದಾರಗೌಳ ಅಷ್ಟತಾಳ ॥

ಖ್ಯಾತ ಯುಧಿಷ್ಠಿರ ನೃಪತಿ ಕೇಳೈ ಸುಖ ।
ದ್ಯೂತವನಿಲ್ಲಿ ನಾವು ॥
ಪ್ರೀತಿಯಿಂದಾಡಬೇಕೆಂಬಾಸೆ ಎನಲ - ।
ಜಾತವೈರಿಯು ಪೇಳ್ದನು ॥ ೧ ॥

ಬೇಡವೈ ದ್ಯೂತ ದುರ್ವ್ಯಸನವು ಇದರಿಂದ ।
ಕೇಡಾಗದಿರದು ಮುಂದೆ ।
ಆಡಿಕೆಟ್ಟನು ಹಿಂದೆನಳರಾಜನದರಿಂದ ।
ರೂಢಿಯೊಳಪಕೀರ್ತಿಯು ॥ ೨ ॥

ದ್ಯೂತದುರ್ವ್ಯಸನವೆಂಬಾತನು ಪಿಸುಣನು ।
ನೀತಿಯನರಿಯದವ ॥
ಭೂತಳದೊಳು ಮೃಗಬೇಟೆ ದ್ಯೂತಗಳೆಮ್ಮ ।
ಜಾತಿಯ ಧರ್ಮವಯ್ಯಾ ॥ ೩ ॥

ಧುರಕೆ ದ್ಯೂತಕೆ ಕರೆದರೆ ಬಾರೆನೆಂಬಾತ ।
ಧರೆಯೊಳು ಕ್ಷತ್ರಿಯನೆ ॥
ಹರಹರ ನೀವಿಂಥ ಷಂಡರಾದಿರೆಯೆಂಬು ।
ದರಿಯೆನೆಂದನು ಶಕುನಿ ॥ ೪ ॥

ಎನೆಕಲಿ ಪ್ರೇರಣೆಯಲಿ ಯಮಜಾತನು ।
ಘನಕ್ರೋಧವೇರಿ ಪೇಳ್ದ ॥
ಮನಕೆ ಬಾರದು ಬರಿ ದ್ಯೂತದಿ ಫಲವೇನು ।
ಪಣವಿದ್ದರಾಡುವೆನು ॥ ೫ ॥

Scanned by CamScanner

ಸಹಜವಿ ದೀಮಾಕು ಬರಿಯಾಟದಿಂದೇನು ।
ಮಹಿಪಾಲರಾಗಿ ನಾವು ॥
ಬಹುಧನಗಳನೊಡ್ಡಿ ಆಡಬೇಕೆಂದನು ॥
ಕುಹಕಿ ಕೌರವನು ತಾನು ॥ ೬ ॥

ಎಮ್ಮಲೆಕ್ಕಕೆ ಮಾವನಾಡುವ ನಿನಗಿದು ।
ಸಮ್ಮತವೇನೆನಲೂ ॥
ಧರ್ಮಜನೆಂದನಾರಾದರೆ ನಮಗೇನು ।
ನಮ್ಮಒಪ್ಪಿಗೆಯೆನಲು ॥ ೭ ॥ ೮೫ ॥

॥ ಭಾಮಿನಿ ॥

ಹೇರಸಾಧಿಪ ಕೇಳು ವಿಧಿಕೃತ ।
ಮೀರಿ ಬಾಳುವರುಂಟೆ ಜಗದಲಿ ।
ಭೂರಮಣಧರ್ಮಜನ ಮನ ದುರ್ವ್ಯಸನಕೆಳಸಿತಲಾ ॥
ಕ್ರೂರಕರ್ಮಿಗಳಿವರ ಕಪಟವ ।
ನಾರವಿಜಸುತನೇನ ಬಲ್ಲನು ।
ಮೀರಿಹಿರಿಯರ ಮಾತ ದ್ಯೂತಕೆ ಕುಳಿತನವನಂದು ॥ ೧ ॥

॥ ರಾಗ ಶಂಕರಾಭರಣ ರೂಪಕತಾಳ ॥

ಆಡಿದರು ಲೆತ್ತಪಗಡೆಯ । ಉಭಯರಾಗ ।
ಆಡಿದರು ಲೆತ್ತಪಗಡೆಯ ॥ ಪ ॥
ಜನಪಧರ್ಮತನಯನಾಗ । ಎಣಿಕೆಗೆಂಟು ಕೋಟಿ ಧನವ ।
ಪಣವನೊಡ್ಡೆ ಕಂಡು ಸುಬಲ । ತನಯ ಶಕುನಿಯು ॥
ಎಣಿಕೆಗಷ್ಟೆ ಧನವತೋರಿ । ಮನದೊಳಧಿಕ ಹರುಷತಾಳಿ ।
ಕ್ಷಣದೊಳಾಡಿಗೆಲಿದ ಕುಂತಿ । ತನಯನರ್ಥವ ॥ ಆ ॥ ೧ ॥

ಮತ್ತೆ ಭಂಡಾರವಖಿಳ । ವಸ್ತುಗಳನು ಪಣವನೊಡ್ಡಿ ।
ಪೃಥ್ವಿಪಾಲನಾಡಿಸಿದನು । ಲೆತ್ತ ಹಾಕುತಾ ॥
ಧೂರ್ತಶಕುನಿಯಾಗತನ್ನ । ಚಿತ್ತದಂತೆ ಗೆಲಿದುಪೇಳ್ದ ।
ವಿತ್ತವಿದ್ದಡಿನ್ನುತೋರು । ಸತ್ತ್ವವೆಂದನು ॥ ಆ ॥ ೨ ॥

ಗೆಲಿದೆನೆರಡು ಬಾರಿಯೆಂದು । ಗಳಹ ಬೇಡ ನೋಡು ಅಖಿಳ ।
ಬಲವನೊಂದೆ ಆಟಕಿಟ್ಟೆ । ಗೆಲುವೆ ನಿನ್ನನು ॥
ಗೆಲುವಿರಯ್ಯ ನೀವು ದ್ಯೂತ । ದೊಳಗೆ ಬಲು ಸಮರ್ಥರೆಂದು ।
ಖಳನುಗೆಲಿದ ಕ್ಷಣದೊಳಖಿಳ । ಬಲವನೆಲ್ಲವ ॥ ಆ ॥ ೩ ॥

Scanned by CamScanner

ನೋಡಿ ಧರ್ಮರಾಯುಖತಿಯೊಳ್ । ರೂಢಿಯನ್ನೆ ಪಣವನೊಡ್ಡಿ ।
ಪಾಡುಪಂಥವಿರಲುಯಿೀಗ । ಆಡುಎಂದನು ॥
ಗಾಢಗರ್ವಬೇಡಮನದಿ । ನೋಡು ಗೆಲುವೆನೆನುತ ಶಕುನಿ ।
ಮೋಡಿಯಿಂದ ಗೆಲಿದುಜರೆದ । ರೂಢಿಪಾಲನ ॥ ೪ ॥ ೯೦ ॥

॥ ರಾಗ ಬಿಲಹರಿ ಅಪ್ಪತಾಳ ॥

ಸೋತೆಯೇನ್ಯೈ ಧರ್ಮರಾಯ । ನಿನಗೇತಕೆ ಪೌರುಷವಯ್ಯಾ ॥
ಮಾತೊಂದನಾಡದೆ ಮೌನದೊಳಿಹ ನಿನ್ನ ।
ಪಾತಕ ಫಲವಿಂತು ಅಪಜಯಗೊಳಿಸಿತು ॥ ಸೋತೆ ॥ ॥ ೧ ॥

ಬಡವರಾದಿರಿ ಈಗ ನೀವು । ನಿಮ । ಗಡವಿಯೆ ಗತಿಯಯ್ಯ ಇನ್ನು ॥
ಪೊಡವಿಯು ಸಕಲಸಂಪದವೆಲ್ಲ ನಮ್ಮಯ ।
ಪೊಡವಿಪಕೌರವಗಾಯಿತಲ್ಲಯ್ಯಾ ॥ ಸೋತೆಏನ್ಯೈ ॥ ೨ ॥ ೯೨ ॥

॥ ಕಂದ ॥

ದುರುಳನ ಕೆಡುನುಡಿ ಕೇಳ್ದಾ ।
ಧರಣಿಪ ಧರ್ಮಜಗೆ ಏರಿಕಲಿಯಾವೇಶಂ ॥
ಭರದಿಂದುರಿಮಸಗುತ್ತಂ ।
ಅರುಹಿದ ಸೌಬಲಗೆ ಉಗ್ರಕೋಪದೊಳಾಗಂ ॥ ೧ ॥ ೯೩ ॥

॥ ರಾಗ ಭೈರವಿ ಝಂಪೆತಾಳ ॥

ಸಾಕೆಲವೊ ಗಳಹದಿರು । ನಿನ್ನಧಟುಗಳನೆಲ್ಲ ।
ನಾಕೇಳದವನಲ್ಲವೈಸೇ ॥ ಈ ಕುಹಕತನ ಬೇಡ ।
ನಿನ್ನ ನಾ ಜೈಸದಿರೆ । ಯಾಕೆನಗೆಯಧಟುತನವಿನ್ನು ॥ ೧ ॥

ಧನವಿಲ್ಲದವನೆಂದು । ಜರೆದೆಯಾ ನೋಡೆಮ್ಮ ।
ಅನುಜ ನಕುಲನ ಜೀವ ಧನವಾ ॥ ಪಣವಿಟ್ಟೆನಾಡೊಮ್ಮೆ ।
ಗೆಲಿದ ಸರ್ವಸ್ವವನು । ಕ್ಷಣದಿ ಮರಳಿಚುವೆ ನೋಡೀಗಾ । ॥ ೨ ॥

ಅಹುದೆಲೈ ತಪ್ಪೇನು । ನೀವು ಛಲ ಉಳ್ಳವರು ।
ಸಹಜನೊಡ್ಡಿದಿರಾಟಕೀಗಾ ॥ ಮಹಿಪ ದುರ್ಯೋಧನನ ।
ಪುಣ್ಯವಿದು ತಾನೆನುತ । ಗಹಗಹಿಸಿ ಗೆಲಿದನಾ ಶಕುನಿ ॥ ೩ ॥

ಮತ್ತೆ ಛಲವಿಮ್ಮಡಿಸಿ । ಸಹಜ ಸಹದೇವನನು ।
ವೃತ್ತಾರಿಸುತ ಮರುತಭವನ ॥ ಮಿತ್ರಸುತ ಸಂಜಾತ ಪಣವೊಡ್ಡಿ ಆಡಿದರೆ ।
ಕೃತ್ರಿಮದಿ ಗೆಲಿದ ಸೌಬಲನೂ ॥ ೪ ॥ ೯೭ ॥

Scanned by CamScanner

॥ ಭಾಮಿನಿ ॥

ಧರಣಿಪನೆ ಕಾಲಾತಿಪಾತವ ।
ಒರೆಯಲರಿವುದೆ ಶಕುನಿ ಕೃತಕವ ।
ತಿರುಹಿಮುಖವನು ಸನ್ನೆಗೈದನು ದೊರೆಯ ಮೊಗನೋಡಿ ॥
ನರವೃಕೋದರ ಯಮಳರಿರ ನಿ ।
ಮ್ಮರಸನಕ್ಷದಿ ಮಾರಿದನು ನೀ ।
ವಿರುವುದೆಮ್ಮೊಳು ಸೇರಿ ಬಾಳುವುದೆಂದ ಕುರುರಾಯ ॥ ೧ ॥

॥ ರಾಗ ಕಾಂಭೋಜಿ ಝಂಪೆತಾಳ ॥

ತಿರುಹುತಮಹಾಗದೆಯ । ಮರುತಭವನೆಂದ ।
ಕುರುದೊರೆಯೆ ಗರ್ವದೊಳೇನ ನುಡಿದೆ ॥
ಕರೆಸಿ ಧರ್ಮಾತ್ಮನನು । ಮರುಳು ಮಾಡಿದೆಯಲ್ಲ ।
ಪರಮ ಸಾಹಸವ ತೋರಿದೆಯಾ ॥ ೧ ॥

ಮೊದಲು ನಿನ್ನನು ತರಿದು । ಹುದುಗಿ ತಂತ್ರವ ಬಲಿವ ।
ಅಧಮರನು ಮುರಿವೆ ಗದೆಯಿಂದಾ ॥
ಮಿದಿದುಶಾಕಿನಿ ಬಳಗ । ಕೊದಗಿಸುತ ಮತ್ತೆನ್ನ ।
ಹೃದಯಾಗ್ನಿಯನು ತಣಿಸಿದಪೆನೂ ॥ ೨ ॥

ಸಾಹಸವನಿಂತಾಡ । ಲೆಂದನರನಣ್ಣನಿ । ನ್ನೂಹನೆ ಇದೇನು ಕಾಳಗವೇ ॥
ದೇಹಿಗೆರವೇ ದೇಹ । ದೇಹಿಭೂಪತಿಯಮಜ ।
ದೇಹವಾವೆಂದೆನುತ ತಡೆದಾ ॥ ೩ ॥ ೧೦೧ ॥

॥ ರಾಗ ಮಧ್ಯಮಾವತಿ ತ್ರಿವುಡೆತಾಳ ॥

ಧಾಳಿಸಲು ಹಾಸಂಗಿಯಾಗುಣ ।
ಶೀಲನೆಂದನು ಗೆಲುವೆ ಸೋತರು ।
ಕೇಳ್ವುದೆನ್ನನು ನಾನೆಯೊಡ್ಡಿದೆ ।
ನೇಳೆನಲು ಖಳಗೆಲಿದನೂ । ಪೇಳಲೇನೂ ॥ ೧ ॥ ೧೦೨ ॥

॥ ವಾರ್ಧಕ ॥

ಎಲೆ ಯುಧಿಷ್ಠಿರ ನೃಪತಿ ನಿನ್ನಾಟ ಮುಗಿದುದೇ ।
ಗೆಲುವ ಛಲವುಂಟೆ ಪಣವಿಲ್ಲ ನಿನಗೆಂದೆನಲು ।
ಖಳನ ಕಠಿನೋಕ್ತಿಗಳ ಕೇಳಿ ಮನನೊಂದು ನೃಪಬಳಿಕೆಂದ ಕೋಪದಿಂದ ॥
ಅಳುಕುವೆನೆ ನೋಡೀಗ ನಿನ್ನಗರ್ವವ ಮುರಿವೆ ।
ಲಲನೆ ಪಾಂಚಾಲೆಯಂ ಪಣವಿಟ್ಟೆ ಆಡೆನಲು ।
ಕಲಿತ ಕೈತವದಿಂದ ಗೆಲಿದನರಕ್ಷಣದೊಳಗೆ ಕುಳಿತ ಸಭೆ ಬೆರಗಾಗಲೂ ॥ ೧ ॥ ೧೦೩ ॥

Scanned by CamScanner

॥ ಭಾಮಿನಿ ॥

ಎಲೆ ಸುಯೋಧನ ಕೊಟ್ಟ ಮಾತಿಗೆ।
ಗೆಲಿದು ಕೊಟ್ಟೆನು ಸಕಲ ಚಾತು।
ಬಲವ ನಾ ಭಂಡಾರ– ಸಹಿತಗ್ಗಳೆಯರೈವರನೂ ॥
ಜಲಜಮುಖಿ ಧರೆಸಹಿತ ನಿನಗೆನು।
ತಲೆ ಬೆರಳನೇಡಿಸುತ ಸೂಚಿಸೆ।
ತಿಳಿದು ವಿದುರನ ಕರೆದು ಪೇಳಿದನಂಥನೃಪನಣುಗ ॥ ೧ ॥ ೧೪ ॥

॥ ರಾಗ ತೋಡಿ ಅಷ್ಟತಾಳ ॥

ವಿದುರ ಬಾರಿತ್ತ ಬೇಗ। ದ್ರೌಪದಿ ಇದ್ದ। ಸದನಕ್ಕೆ ಪೋಗಲೀಗ ॥
ಚದುರರೈವರು ನಮ। ಗೊದಗಿದರಾನಾರಿ।
ಹದುಳದೊಳೀದಾಸಿ। ಪದದೊಳಿರಲಿ ಮುಂದೆ ॥ ೧ ॥

ಇಲ್ಲಿ ನಡೆದ ಬಗೆಯ। ಹೇಳುತ ಮನ। ದಲ್ಲಿಹ ಯೋಚನೆಯ ॥
ಮೆಲ್ಲನೆ ತಿಳಿದು ಮೇ। ಣಿಲ್ಲಿಗೆ ಕರತಾರೊ।
ನಿಲ್ಲಗೊಡುವೆನವಳ। ಬಲ್ಲನಿವಾಸದಿ ॥ ವಿದುರ ॥ ೨ ॥ ೧೦೬ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಎನಲು ಕೋಪದಿ ನುಡಿದ ವಿದುರನು। ನಿನಗಿದೇಕೈ ದುಷ್ಟದುರ್ಮತಿ।
ಬಣಗನೀನೇನೆಂದು ತಿಳಿದಿಹೆ। ಮನದೊಳಿಂದು ॥ ೧ ॥

ಕೃತ್ರಿಮದ ದ್ಯೂತದಲಿ ನೀನಾ। ಸತ್ಯನಿಧಿಗಳ ಗೆಲಿದುದಲ್ಲದೆ।
ಮತ್ತ ಕಾಶಿನಿಯನ್ನು ಕೆಣಕಲು। ಮೃತ್ಯುವೈಸೇ ॥ ೨ ॥

ಸಾರಿ ಪೇಳಿದೆನೀಗ ದ್ರುಪದ ಕು। ಮಾರಿಯನು ನೀವ್ ಕೆಣಕಲಂತಕ।
ನೂರಕಾಂಬಿರಿ ಸತ್ಯವಿದು ಕಂ। ಸಾರಿಯಾಣೆ ॥ ೩ ॥ ೧೦೯ ॥

॥ ರಾಗ ಮಾರವಿ ಏಕತಾಳ ॥

ಕೇಳಿ ಸುಯೋಧನ। ಪೇಳಿದನ್ಯಾಕೆಲೊ। ಒರೆಯದಿರೆಮ್ಮಿದಿರು ॥
ಅರಿತಿಹೆ ನಿನ್ನಯ ಪರಿಯನು ಕುಂತಿಯ। ತರಳರ ಪ್ರಿಯನೆಂದೂ ॥ ೧ ॥

ಸೋತರು ಪಂಥದ। ದ್ಯೂತದಿ ಪಾಂಡವರೇತಕೆ ನಿನಗದರಾ ॥
ಮಾತೆನುತಾಕ್ಷಣ। ಪ್ರತಿಕಾಮಿಕನನು। ತಾತಳುವದೆಕರೆದಾ ॥ ೨ ॥

ಎಲವೋ ದೂತನೆ। ಘಳಿಲನೆ ತೆರಳಾ। ಲಲನೆಯ ಬರಹೇಳು ॥
ಛಲವನು ತೋರ್ದರೆ। ಬಳಿಕಾ ದುರುಳೆಯ। ನೆಳತಾರೀ ಕಡೆಗೇ ॥ ೩ ॥ ೧೦೨ ॥

Scanned by CamScanner

॥ ಭಾಮಿನಿ ॥

ಎನೆ ಹಸಾದವೆನುತ್ತ ಬಂದನು।
ವನಿತೆ ದ್ರುಪದಾತ್ಮಜೆಯ ವಾಸದ।
ಮನೆಗೆ ತಾ ಕಳೆದಖಿಳದ್ವಾರವ ನೊಳಪ್ರವೇಶಿಸುತಾ॥
ವನಜಮುಖಿಯರ ಮೊತ್ತದೊಡನಾ।
ಕನಕಪುತ್ಥಳಿಯಂತೆ ರಂಜಿಪ।
ಮನುಮಥನ ಮದದಾನೆಗೆರಗುತಲೆಂದನಾ ದೂತ ॥ ೧ ॥

॥ ರಾಗ ದೇವಗಾಂಧಾರ ಅಷ್ಟತಾಳ ॥

ದೇವಿ ನೀ ಲಾಲಿಸಮ್ಮ। ಎಮ್ಮಯ ಕುರು। ಭೂವರನೆಂದ ನಿಮ್ಮ॥
ಆ ವಿಭವದಿ ರಂಜಿಸುವ ಸಭೆಗೀಗಲೆ।
ನೀವೈತರುವುದೆಂದನು। ಮತ್ತವನು॥ ದೇವಿ ॥ ೧ ॥

ದ್ಯೂತವನಾಡಿದನು। ಸೋತನು ನಿಮ್ಮ। ನಾಥ ಯುಧಿಷ್ಠಿರನು॥
ಭೂತಳ ಸಕಲ ಭಂಡಾರಾದಿಗಳ ಸಹ।
ಜಾತ ಭೀಮಾರ್ಜುನರ। ಮಾದ್ರೇಯರ॥ ದೇವಿ ॥ ೨ ॥

ಬಳಿಕತನ್ನನೆ ಸೋತನು। ನಿಮ್ಮನು ನೃಪ। ತಿಲಕ ಸೋತನು ಮಾತೇನು॥
ಖಳನು ಕೌರವನು ನಿರ್ದಾಕ್ಷಿಣ್ಯದಿಂದಲಿ॥
ಎಳೆದು ತಾರೆಂದಿಹನು। ನಿಮ್ಮುವನೂ॥ ದೇವಿ ॥ ೩ ॥ ೧೧೬ ॥

॥ ಭಾಮಿನಿ ॥

ಪ್ರಾತಿಹಾರಕನೆಂದ ನುಡಿ ಕೇ।
ಳ್ದಾ ತಳೋದರಿ ಮರುಗಿ ನುಡಿದಳು।
ಸೋತನೇ ಎನ್ನರಸ ಹಿರಿಯರ ಮಾತುನಿಜವಾಯ್ತು॥
ದೂತ ಹೇಳ್ಯೆದ್ಯೂತದಲಿ ಯಮ।
ಜಾತ ತನ್ನನು ಸೋತ ಬಳಿಕವೆ।
ಸೋತನೇ ತಾನೆನ್ನನೆನಲಹುದೆಂದ ಕೈಮುಗಿದು॥

॥ ರಾಗ ತೋಡಿ ಅಷ್ಟತಾಳ ॥

ದೂತ ನೀ ಲಾಲಿಸೈಯ್ಯಾ। ಪೇಳುವೆನೊಂದು। ಮಾತನು ಪಾಲಿಸಯ್ಯಾ॥
ದ್ಯೂತದಿ ತನ್ನತಾ ಸೋತ ಮೇಲ್ ಯಮಜನು।
ಸೋತರೆನ್ನನು ಈಗ। ನೀತಿಯಪ್ಪುದೆ ಪೇಳು॥ ದೂತನೀ ॥ ೧ ॥

ಪೇಳು ಈ ಪ್ರಶ್ನೆಯನು। ಸಭೆಯವರೀಗ। ಪೇಳಲುತ್ತರವನಿನ್ನು॥
ಶೀಲವಂತರು ಗಂಗಾ। ಬಾಲದ್ರೋಣಾದ್ಯರು। ಪೇಳಲಿ ನ್ಯಾಯವ।
ಮೇಲೆ ನಾ ಬರುವೆನು॥ ದೂತ ನೀ ಲಾಲಿಸೈಯ್ಯಾ ॥ ೨ ॥ ೧೧೯ ॥

Scanned by CamScanner

॥ ವಾರ್ಧಕ ॥

ಇಂತೆಂದು ಪಾಂಚಾಲೆ ಪೇಳ್ದ ನುಡಿಯಂ ಕೇಳ್ದು ।
ತಾಂ ತಳುವದೈತಂದು ಪ್ರತಿಕಾಮಿಕನು ಭೂಮಿ ।
ಕಾಂತ ಕೌರವಗೆಂದ ಧರ್ಮಜನು ತನ್ನ ತಾ ಸೋತ ಮೇಲಿಂದು ಮುಖಿಯಾ ॥
ಪಂಥದಿಂದಾಡಿ ಸೋತರೆ ಸೋಲವಪ್ಪುವುದೆ ।
ಎಂತಿದರ ನಿರ್ಣಯವ ಸಭೆಯವರು ಪೇಳಲಾ ।
ನಂತರದಿ ಬರುವೆನೆಂದಾವನಿತೆ ಪೇಳ್ದಳೆನೆ ಕನಲುತೆಂದನು ಭೂಪನು ॥ ೧ ॥ ೧೨೦ ॥

॥ ರಾಗ ಕಾಂಭೋಜಿ ಝಂಪೆತಾಳ ॥

ಬಾಯಹೊಡಿರಿವ ಬಂದು । ಬಗುಳುವನು ಶಕ್ರಸುತ ।
ವಾಯುಜರ ಭೀತಿಗರಹೊಡೆದೂ ॥
ಆಯತಾಕ್ಷಿಯ ನೆಳೆದುತಾರದೇತಕೆ ಬಂದೆ । ಆಯತಿಕೆ ಸಾಕು ತೆರಳಿನ್ನೂ ॥ ೧ ॥

ತಮ್ಮ ದುಶ್ಶಾಸ ಬಾ । ಬೆದರದಿರುತಿರುಕುಳರು ।
ನಮ್ಮ ದಾಸರು ಪಾಂಡುಸುತರೂ ॥ ಹೆಮ್ಮೆಗಾತಿಯ ತುರುಬ ।
ಪಿಡಿದೆಳೆದು ತಾ ಹೋಗು । ಸಮ್ಮತಿಸದಿರಲು ಬೇಗೆಂದ ॥ ೨ ॥

ಒರೆದ ನುಡಿಯನು ಕೇಳಿ । ದುರುಳನತಿ ವೇಗದೊಳು ।
ಹರಿತಂದ ಕೃಷ್ಣೆ ಇಹ ಮನೆಗೆ ॥ ಭರದಿಂದಲೊಳಪೊಕ್ಕು ।
ತರುಣಿಯಿದಿರೊಳು ನಿಂದು । ಗರುವದಿಂದೆಂದ ನಾ ಕುಮತಿ ॥ ೩ ॥

ಎಲಗೆ ನೀನೇನೆಂದೆ । ಬರುವದೊಳ್ಳಿತು ಸಾರ್ದೆ ।
ಸಲದಿನ್ನು ಗರ್ವವಿದು ನಿನಗೆ ॥ ಛಲವಂತ ಕುರುಪತಿಯ ।
ಕರುಣವನು ಪಡೆತೊತ್ತಿ । ರಲಿ ಸೇರುಯೇಳುಯೇಳೆಂದಾ ॥ ೪ ॥ ೧೨೪ ॥

॥ ಭಾಮಿನಿ ॥

ಜನಪ ಕೇಳಿಂತೆಂದು ಖೂಳನು ।
ವನಿತೆಗಾಡಲು ಕೇಳಿ ದ್ರೌಪದಿ ।
ಮನದಿ ಬೆದರುತ ಮತ್ತೆ ನುಡಿದಳು ನಯದಿ ದುರುಳನಿಗೆ ॥
ಎನಗೆಮ್ಮೈದುನ ನೀನು ಮರು ಮಾ ।
ತೆನಗೆ ದೊರೆಯಲ ಪ್ರಶ್ನೆಗಲ್ಲದೆ ।
ಅನುಜ ಕೇಳ್ವಾ ಪುಷ್ಪವತಿ ಬರಲೆಂತು ಸಭೆಗೆನಲೂ ॥ ೧ ॥ ೧೨೫ ॥

॥ ರಾಗ ಪಂತುವರಾಳಿ ಅಷ್ಟತಾಳ ॥

ಸಾಕುಗಳಹ ಬೇಡ ಸಾರಿದೆ । ಕುಹತನವ ।
ತೋರಬೇಡ । ಜೋಕೆಯಿಂದ ಬಾರೆ ಸಾರಿದೇ ॥ ಪ ॥
ಎಲ್ಲಿ ನಿನ್ನ ದುಷ್ಟ ಪ್ರಶ್ನೆಯು । ಮತ್ತದಕೆ ಮರುಮಾ ।

Scanned by CamScanner

ತೆಲ್ಲಿ ತಿಳಿದೆನೀಗ ಯುಕ್ತಿಯು ॥ ಇಲ್ಲಿ ಪುಷ್ಪವತಿಯೊ ನೀನು ।
ಅಲ್ಲಿ ಫಲಪ್ರದಾಗದಿನ್ನು । ಹಲ್ಲಬಿಟ್ಟು ನಗೆಯ ಸೂಸು ।
ವಲ್ಲಿಗಾಯ್ತು ನಿನ್ನಗರ್ವ ॥ ಸಾಕು ॥ ೧ ॥

ಎಂದು ದುರುಳನಾಗ ಸಹಿಸದೆ । ಕೈಇಕ್ಕಿಪಿಡಿದ ।
ನಿಂದುಮುಖಿಯ ಮುಡಿಯ ತಳುವದೆ ॥
ಬಂದು ತಡೆದ ಸಖಿಯರನ್ನು । ಹಿಂದೆಮುಂದೆ ತುಳಿದು ಪಿಡಿದು ।
ಅಂಥ ನೃಪತಿಯಣುಗನೆಳೆದು । ತಂದರಾಜ ಬೀದಿಯಿಂದ ॥ ಸಾಕು ॥ ೨ ॥ ೧೨೩ ॥

॥ ವಾರ್ಧಕ ॥

ಜನಪ ಜನಮೇಜಯನೆ ಲಾಲಿಸೈ ಪಾಂಚಾಲೆ ।
ಯನು ಪಿಡಿದು ಖಳನೆಳೆದುತರೆಕಂಡು ಭೀಮ ಫಲು ।
ಗುಣರಧಿಕಕೋಪದಿಂದೀಖೂಳರನ್ವಯವ ತರಿವೆನೆಂದೇಳಲಾಗ ॥
ಇನಜಸಂಜಾತ ಭ್ರೂಸಂಜ್ಞೆಯಿಂ ಸಂತೈಸ ।
ಲನಿತರೊಳಗಿವನ ಕೈಯಿಂದ ತುರುಬಂ ಬಿಡಿಸಿ ।
ಕುರುಜನಪ ದ್ರೌಪದಿಯ ಕರೆದೆಂದ ಮದಗರ್ವದುದ್ರೇಕದಿಂ ಸಭೆಯೊಳು ॥ ೧ ॥ ೧೨೮ ॥

॥ ರಾಗ ಬೇಗಡೆ ಏಕತಾಳ ॥

ತಾಳು ದುಗುಡವಿದೇಕೆ ಪಾಂಚಾಲೆ । ನಿನ್ನರಸ ಸೋತಿಹ ।
ಮೇಲೆ ಮರುಗಿದರೇನು ಫಲಪೇಳೇ ॥
ಖೂಳತನವನು ಬಿಟ್ಟುಹರುಷದಿ ।
ಬಾಳುರಾಣೀವಾಸ ವಲ್ಲದಡೇಳು ತೊತ್ತಿರಸೇರು ನೀನೆನೆ ।
ಬಾಲಕಿಯು ಮಗುಳೆಂದಳವನೊಳು ॥ ತಾಳು ॥ ೧ ॥

ತನ್ನ ಸೋಲಿನ ಮೇಲೆ ಧರ್ಮಜನು । ಪಣವಿಟ್ಟು ಸೋತರೆ ।
ಎನ್ನಸಲುವುದೆ ಪೇಳು ಧರ್ಮವನು ॥
ಇನ್ನಿದರ ಧರ್ಮವನು ನಿಶ್ಚಯ ।
ವನ್ನರುಹಿ ಸಭೆಯವರು ಮೆಚ್ಚಿಸಲೆನ್ನನೆನುತೆಂದರುಹಲಾ ಸಂ ।
ಪನ್ನೆಗೆಂದನು ಸೂತತನಯನು ॥ ೨ ॥ ೧೩೦ ॥

॥ ರಾಗ ಶಂಕರಾಭರಣ ಅಷ್ಟತಾಳ ॥

ಚಪಳೆಬಿಡು ವಿಚಾರನಿನಗೆ । ನೃಪ ಲಲಾಮನಿದಿರೊಳೀಗ ॥
ಕುಪಿತಗೊಳಿಸಿ ಕೆಡಲು ಬೇಡ । ದ್ರುಪದನಂದನೆ ॥ ೧ ॥

ವಾರಸತಿಯರಂತೆ–ನೃಪಕು । ಮಾರರ್ಗೆವರಿವರಕೂಡಿ ।
ಜಾರೆ ಎನಿಸಿದವಳ್ಗೆಧರ್ಮ । ಸಾರವೇತಕೆ ॥ ೨ ॥

Scanned by CamScanner

ಕುಲದೊಳಧಿಕ ಕೀರ್ತಿವಂತ । ನೆಲೆಗೆ ಕೌರವೇಂದ್ರನಿಂಗೆ ॥
ಲಲನೆಯಾಗಿ ಬಹಳ ಭಾಗ್ಯ । ಗಳನು ಭೋಗಿಸು ॥ ೩ ॥

ವಿಹಿತವೆನಲು ಶಕುನಿಪೇಳ್ದ । ಸಹಜಕರ್ಣನೆಂದ ಮಾತು ।
ಮಹಿಪ ಕುರುಕುಲೇಶನಿಂಗೆ । ಮಹಿಳೆಯಾಗು ನೀ ॥ ೪ ॥

ದಾಸರಾದಪಾಂಡುಸುತರೊ । ಳೇನು ಸುಖವನುಂಬೆ ವಸನ ।
ಭೂಷಣಗಳ ಧರಿಸಿಕೂಡು । ಭಾಸುರಾಂಗಿಯೇ ॥ ೫ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಖೂಳರಿವರಾಡುವ ದುರುಕ್ತಿಯ । ಕೇಳಿ ಮನನೊಂದಾಗ ಭೀಷ್ಮನು ।
ಪೇಳಿದನು ಕಡುಕೋಪದಿಂದ । ನೃಪಾಲನಿಂಗೆ ॥ ೧ ॥

ವಾರಕದ ವಿವಿಧಾಭರಣ । ಶೃಂಗಾರ ವಂತಿರಲೀಕೆ ಪೇಳಿದ ।
ಸಾರ ಪ್ರಶ್ನೆಗೆ ಪೇಳದುತ್ತರ । ಮೀರಬಹುದೇ ॥ ೨ ॥

ಸತ್ಯಪಾಶದಿ ಸಿಲುಕಿ ಪಾಂಡವ । ಪೃಥ್ವಿಪಾಲರು ಸುಮ್ಮನಿದ್ದರೆ ।
ನೆತ್ತಿಗೇರಿಕೆ ಗರ್ವದುಮ್ಮಹ । ಪಿತ್ತ ನಿಮಗೇ ॥ ೩ ॥

ಆತಗೆಂದನು ಕುರುನೃಪಾಲನು । ನೀತಿತಪ್ಪುವರಲ್ಲ ದ್ಯೂತದಿ ।
ಸೋತಭೃತ್ಯರು ನಮಗೆ ಕುಂತಿಯ । ಜಾತರೈಸೇ ॥ ೪ ॥

ನೀವು ಗರ್ಜಿಸಿ ನುಡಿದರಂಜೆವು । ಈ ವನಿತೆಯನು ತೊತ್ತು ವರ್ಗಕೆ ।
ನಾವು ಸೇರಿಸದಿರೆವು ನಿಮಗೇ । ಕೀ ವಿಚಾರಾ ॥ ೫ ॥

॥ ರಾಗ ಶಂಕರಾಭರಣ ಮಟ್ಟೆತಾಳ ॥

ಧರಣಿಪಾಲ ಕುರುಕುಲೇಶ । ನೊರೆದ ನುಡಿಯ ಕೇಳಿ ಭೀಮ ।
ಮರುಗಿ ಮನದಿ ಪುರುಷ ವೃತ್ತಿ । ಗಿರದೆ ನಾಚಿದ ॥
ಭರಿತ ರೋಷವಿಡಿದು ಹೊಡೆದು । ಸರ್ವಭಂಗವೆರೆದ ಧರ್ಮ ।
ನೆರಡುಕರವನುರುಹಿ ಶೌರ್ಯ । ದಿರವತೋರ್ಪೆನು ॥ ೧ ॥

ಜ್ಞಾತಿಬಲವ ಮುರಿದು ನೃಪರ । ಜಾತದಳವತಿದ್ದಿ ವಿಮಲ ।
ಖ್ಯಾತಿಯನು ಪ್ರಕಾಶಪಡಿಸಿ ಪು । ನೀತನಾಗುವೆ ॥
ಸಾತಿಶಯದೊಳೆಂದ ನಕುಲ । ಗೋತುಕಿಚ್ಚ ತರುವುದೆಂದು ।
ಖಾತಿಯಿಂದ ತುಡುಕೆ ತಡೆದ । ಶ್ವೇತವಾಹನಾ ॥ ೨ ॥

ಏನಿದೇನು ಭೀಮಧರ್ಮ । ಸೂನು ಗುರುವಿಶೇಷ ಮನುಜ ।
ಹಾನಿ ವೃದ್ಧಿ ಎಲ್ಲ ಕಾರ್ಯ । ತಾನೆ ತೋರುವ ॥
ಈ ನಿರೋಧ ಸಲ್ಲದೆನಲು । ಹೀನ ಕೌರವರ ವಿನಾಶ ।
ಕಾಣದೆನ್ನ ನೀಳತೋಳ್ಗ । ಳಾನಲಾರದೂ ॥ ೩ ॥

Scanned by CamScanner

ಸುಡುವೆನಗ್ನಿಯಲ್ಲಿ ಪುಣ್ಯ । ಪಡೆವೆನೆಂದು ಮಿಡುಕಲಿಂತು ।
ತಡೆಯುತೀರ್ದರಿತ್ತ ಸಾಧ್ವಿ । ನಡುಗುತಿರ್ದಳು ॥
ಕಡುಬಲಾಢ್ಯರೈವರಿದ್ದು । ಕಡೆಯ ಮೃತ್ಯುಬಾಯ್ಗೆಕೊಡುವ ।
ರೊಡೆಯರೆಂಬ ಕಡೆ ವಿಕರ್ಣ । ನುಡಿದನಾಕ್ಷಣ ॥ ೪ ॥ ೧೪೪ ॥

॥ ರಾಗ ಪಂತುವರಾಳಿ ಮಟ್ಟೆತಾಳ ॥

ಎಂದು ಯಜ್ಞಸುತೆಯು ಪೇಳ್ದ ಮಾತ ಕೇಳುತಾ ।
ಲಂದು ಪೇಳ್ದನಾ ವಿಕರ್ಣ । ಖತಿಯ ತಾಳುತಾ ॥
ಇಂದಿದೇನು ನಿಮ್ಮಜಿಹ್ವೆ ಒಳಕೆ ಸರಿಯಿತೆ ॥
ಒಂದು ಮಾತನಾಡದಿಹುದು । ನೀತಿಯಾಯಿತೆ ॥ ೧ ॥

ಅರಿತ ಪ್ರಾಜ್ಞರಿಂದು ನೀವು ಸುಮ್ಮನಿರುವಿರೆ ।
ಗುರುಜಗುರು ಕೃಪಾದಿದ್ವಿಜರು । ಮೌನವಾಂತಿರೆ ॥
ತರುಣಿ ಪೇಳ್ದ ಪ್ರಶ್ನೆಗುತ್ತರವನು ಪೇಳಿರೀ ॥
ಕುರುನೃಪಾಲಗಂಜಿಸುಮ್ಮನಿರಲು ಬೇಡಿರಿ ॥ ೨ ॥

ತನ್ನ ತಾನು ಸೋತ ಮೇಲೆ ಧರ್ಮರಾಯನು ।
ಅನ್ಯನಾದನೀಕೆಗೆಂತು ಸಲುವದೆಂದನೂ ॥
ಅನ್ಯನನ್ಯಸತಿಯ ಸೋತರಿದುವು ನ್ಯಾಯವೆ ।
ಎನ್ನ ಮನಕೆ ಸರಿಯುಬಾರದೀಗ ಪೇಳಿದೆ ॥ ೩ ॥

॥ ರಾಗ ಭೈರವಿ ಏಕತಾಳ ॥

ಎನೆ ಕೇಳುತ ಕಲಿಕರ್ಣ । ತಾ । ಕನಲುತಲೆಂದ ವಿಕರ್ಣಾ ॥
ಇನಿತೇತಕೆ ಮಾತುಗಳು । ನಿ । ನ್ನನು ಕೇಳ್ದವರಾರ್ ಪೇಳು ॥ ೧ ॥

ನುಡಿದರೆ ಭೀಷ್ಮಾದಿಗಳು ಬಾ । ಯ್ಬಡಿಕನೆ ನಿನಗೇಕಿವಳು ॥
ನುಡಿದಿಹ ಪ್ರಶ್ನೆಗುತ್ತರವ ನಾವ್ । ಕೊಡುವೆವು ಬಿಡು ಪೌರುಷವಾ ॥ ೨ ॥

ಜನಪ ಸುಯೋಧನನೊಡನೆ । ನೀ । ಜನಿಸಿದೆಯಾತಕೊಜಡನೆ ॥
ನಿನಗೇಕಿದರ ವಿಚಾರ । ಸಾ । ಕೆನುತಲಿ ಜರೆದನು ಶೂರ ॥ ೩ ॥

ಬಿಡು ಬಾಯ್ದಂಬ ವಿಕರ್ಣಾ । ಬಹು । ನುಡಿ ಪಂಡಿತನೇ ಎನ್ನ ॥
ಒಡಹುಟ್ಟಿದೆ ಯಾಕೆಂದು । ಕುರು । ಪೊಡವಿಪ ಜರೆದನುನಿಂದೂ ॥

॥ ರಾಗ ಕಮಾಚು ರೂಪಕತಾಳ ॥

ಕೇಳು ಸಹಜ ಕಾರ್ಯದೊಳಿಗ । ದುಶ್ಶಾಸನಾಖ್ಯ ।
ಕೇಳು ಸಹಜ ಕಾರ್ಯದೊಳಿಗ ॥

Scanned by CamScanner

ಕೇಳು ಸಹಜ । ತಾಳು ಭರವ । ಸೋಲವಡೆದ ಪಾಂಡುಸುತರ ।
ಮೇಲೊಳೇಕೆ ರಾಜಭೂಷ ! ಣಾಳಿಯುಡಿಗೆ ತೊಡಿಗೆಯೆಲ್ಲ ॥ ಅ ॥ ಪ ॥
ಏತರಾತಿಶಯ ವಿಲಾಸವೊ । ಪಾಂಡವರ ಸತಿಗಿ । ನ್ನೇತರಾಭರಣಗಳಂದವೊ ॥
ಸೋತರಿಂದು ಸರ್ವವಿಭವ । ಪೇತರಂದು ಲೆಕ್ಕಿಸದ ಬ ।
ಲಾತಿರೇಕವೆಲ್ಲ ಚೆಲ್ಲಿ । ಈ ತೆರನರಾದರ್ರೈಸೆ ॥ ಕೇಳು ಸಹಜ ॥ ೧ ॥

ಎಂದನುಡಿಯ ಕೇಳಿ ದುರುಳನು । ದ್ರೌಪದಿಯ ಮುಂದೆ ।
ಬಂದುನಿಂದ ವಿಕೃತಿ ರೂಪನು ॥
ಚಂದದಿಂದ ಕಳೆವುದೆಲ್ಲ । ವೆಂದನಾಗ ಭಯವಿಷಾದ ।
ದಿಂದ ನಡುಗಲಾಕೆ ಸೆರಗ । ಸಂದಹಿಡಿದು ಸೆಳೆದನಾಗ ॥ ೨ ॥ ೧೫೩ ॥

॥ ರಾಗ ಮಧ್ಯಮಾವತಿ ಅಷ್ಟತಾಳ ॥

ಕಂಡಿರೆ ಸೀರೆಯನು ಸೆಳೆವ ಬಲು । ಭಂಡನ ಭಂಗಿಯನು ।
ಸತಿಯ ಮಾನ । ಖಂಡಿಪರೀತಿಯನು ॥
ಮಂಟಪದೊಳೆಲ್ಲರು ಸಮಾಧಿಯ ।
ಗೊಂಡು ಕುಳಿತಿರೆ ಕುಳಿತುದುಚಿತವೆ । ಗಂಡರೈವರು ಮೈದೆಗೆಯೆತ ।
ನ್ನಂಡಲೆಯ ಭಾವಿಸುವರುಂಟೇ ॥ ಕಂಡಿರೆ ॥ ೧ ॥

ಕ್ರೂರದುಶ್ಯಾಸನನು । ಗಾಂಧಾರಿ ನೀ ।
ನರಿಯೆಯ ಕಾಣದೇನು । ಬಿಡಿಸು ಸೊಸೆಯ । ಸೀರೆಯಸುಲಿವುದನ್ನು ॥
ವೀರಸೈಂಧವನರಸಿಯೆ ॥ ನಿನಗಾರು ಸೋದರಿ ಭಾನುಮತಿಯೇ ।
ಬಾರದೇಮನವಕಟ ಸ್ತ್ರೀ ಸಂ । ಸಾರವೆಲ್ಲ ಸಮಾನವರಿಯಿರೇ ॥ ೨ ॥

ಪತಿಗಳು ಸಾರಿಗಿತ್ತು । ನಾರಿಯ ಧರ್ಮ । ಸ್ಥಿತಿಯನು ಕೊಂಡರಿಂತು ।
ಭೀಷ್ಮಾದಿಧರ್ಮ । ಯುತರೆಲ್ಲ ಮೌನವೆತ್ತು ॥
ಹಿತವನರುಹುವರಿಲ್ಲ ಹಿರಿಯರ । ಮತಿಗೆ ಬಾರದು ಅತ್ತೆ ಮಾವಗೆ ।
ಸುತನ ಮೋಹದಿ ತಡೆವರಿಲ್ಲಾ । ಗ್ರ್ತಿಯನಾಥೆಗೆ ಕಾಣೆ ಕೃಷ್ಣಾ ॥ ೩ ॥ ೧೫೪ ॥

॥ ವಾರ್ಧಕ ॥

ಜಯಜಯ ರಮಾರಮಣ ಜಯಘೋರ ಭವಹರಣ ।
ಜಯಜಯ ಸದಾನಂದ ಜಯವರದ ಗೋವಿಂದ ।
ಜಯತುಯಾದವ ಕೃಷ್ಣ ಜಯತು ಖಲಕಂಸೋಷ್ಣ ಜಯತುವಟಪತ್ರಶಯನಾ ॥
ಜಯನನ್ನೆ ಕಾವ ಭರನಯಶಾಲಿನೀನೆನುತ ।
ದ್ವಯನೇತ್ರ ಮಂಮುಚ್ಚಿ ಭಯದಿ ಮೊರೆ ಇಡಲಾಗ ।
ದಯದೋರಿ ಸೀರೆಯಕ್ಷಯವಾಗಲೆಂದಭಯನಯ ವರವನಿತ್ತ ಹರಿಯು ॥ ೧॥ ೧೫೫ ॥

Scanned by CamScanner

॥ ಭಾಮಿನಿ ॥

ಕೇಳು ನೃಪ ಮಾಯಾಮನುಜ ಹರಿ ।
ಲೀಲೆಯನು ಬಂಣಿಸುವುದೆಂತುಟೊ ।
ಶೀಲೆಗೊದಗಿದ ಅಕ್ಷಯಾಂಬರ ಘನವಿಲಾಸವದೂ ॥
ಖೂಳದುಶ್ಯಾಸನನು ಕೌರವ ।
ನಾಳ ಸನ್ನೆಯನರಿತು ಹಿಡಿದೆಳೆ ।
ದೇಳುಬೀಳುಗಳಿಂದ ಬಳಲಿದ ಸೀರೆಯೊಡನಂದೂ ॥ ೧ ॥

॥ ರಾಗ ಮಾರವಿ ಏಕತಾಳ ॥

ಅರರೆ ಇದೇನಚ್ಚರಿಕಾಂಬುದು । ತರತರ ಸೀರೆಗಳಿಲ್ಲೀ ॥
ತರಳೆಯ ಗರುವವ । ಮುರಿಯುವೆನೂ ಸರ್ವ । ವಿರವಾದರು ಬಿಡೆನು ॥ ೧ ॥

ನಿಲುನಿಲು ಸಾಗದೆ । ಸುಲಿಯುವೆ ನೋಡೆಂ । ದೆಳೆದೆಳೆದನುನೆರಿಯಾ ॥
ಬಲುಗರ್ವದಿ ಕೈ । ಚಳಕವ ತೋರಿದ । ಬಳಿಕಿಳೆಗುರುಳಿದನೂ ॥ ೨ ॥

ನೋಡಿ ವಿದುರನಲ್ಲಾಡಿದ ತಲೆಯ । ಕೆಡ ಬೇಡಿರಿ ದುಷ್ಕೃತದಿ ॥
ಪಾಡರಿಯದೆ ಕೈಮಾಡಿ ಸತಿಯ । ಮೃತಿ । ಗೂಡದಿರೆಂದೊರೆದ ॥ ೩ ॥

ಜಾತಿ ಮರುಳನಿವ । ಮಾತಿನೊಳಂಜಿಪ । ಕಾತರವಿಲ್ಲೆಮಗೆ ॥
ಸೋತವರಿಂ ಭಯ । ವೇತರವೆಂದನು । ಸೂತಜಗಿಳೆಯರಸ ॥ ೪ ॥

ಘಡ ದ್ರೌಪದಿ ಹದಿಬದೆಯಾಗಲಿ ನ । ಮ್ಮೆಡೆಯಲಿಗೆಲುವುಂಟೆ ॥
ನಡೆಯಲಿ ತೊತ್ತಿರ ಕಡೆಗೆಂದೊರೆದನು । ತೊಡೆಯಾಡಿಸಿ ಹೊಡೆದೂ ॥ ೫ ॥

ದೃಷ್ಟಿಯ ತೆರೆದಳು । ಸಿಟ್ಟಿನೊಳ್ಳೈವರ । ಪಟ್ಟದರಸಿ ಕೂಡೆ ॥
ಸುಟ್ಟುದು ಸೀರೆಗ । ಳೊಟ್ಟಿಲು ಭಯದಲಿ । ಸೃಷ್ಟಿಯೆ ನಡುಗಿದುದು ॥ ೬ ॥

॥ ರಾಗ ಭೈರವಿ ಏಕತಾಳ ॥

ಭಲ ದುರ್ಯೋಧನ ಕೇಳ । ನೀ । ಕುಲಕೆ ಕೊಡಲಿಯಾದೆಯಲಾ ॥
ಬಳಲಿಸಿದ್ಯೆ ಸಾತ್ವಿಕರ । ಪ್ರತಿ । ಫಲವನು ಪಡೆಯ್ಯೆದುರುಳಾ ॥ ೧ ॥

ಎನ್ನಿರವರಿಯದೆ ನುಡಿದ್ಯೆ । ತೊಡೆ । ಯನ್ನು ಜಡಿದು ಛಲತೋರ್ದ್ಯೆ ॥
ಉನ್ನತ ಭೀಮನ ಗದೆಯ । ಹತಿ । ಯನ್ನು ಪಡೆದು ಕೆಡೆಯಯ್ಯಾ ॥ ೨ ॥

ತಬ್ಬಲಿ ಮಾಡಿದನೆನ್ನ । ಮದ । ಕೊಬ್ಬಿದ ದುಶ್ಯಾಸನನ ॥
ಸಬ್ಬ ಬಲವ ಮುರಿದುಂಡು । ಮೈ । ಯುಬ್ಬಲಿ ಭೀಮನ ಗಂಡು ॥ ೩ ॥

ದ್ಯೂತದಿ ಗೆಲಿಸಿದರೇನು । ಆ । ಸೂತಜಶಕುನಿಯರಿನ್ನು ॥
ಮಾತೇನರಿವರು ರಣದಿ । ನರ । ಜೋತಿಪರಸ್ತ್ರ ಸಂಕುಲದೀ ॥ ೪ ॥ ೧೬೮ ॥

॥ ಭಾಮಿನಿ ॥

ರೋಷ ಪರವಶನಾಗಿ ಕರ್ಣನು ।
ದಾಸ ಭಾವದಕಿರುಕುಳರ ಛಲ ।
ವೇಸು ದ್ರೌಪದಿ ಭಾಷೆ ಎತ್ತಣ ಮಾತು ನೂಕೆಂದಾ ॥
ಲೇಸೆನುತ ಕುರುರಾಯನಿವಳನು ।
ದಾಸಿಯರ ಕಡೆ ಸೇರಿ ಬದುಕುವ ।
ಸಾಸ ಸಾಕೆಂದೊದರಿ ದುಶ್ಶಾಸನಗೆ ನೇಮಿಸಿದ ॥ ೧ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಎಲೆ ದ್ರುಪದಸುತೆ ತೋರು ನಗುಮೊಗ ।
ಬಲು ನೃಪರ ಸೇರುವೆಯ ಮಂಟಪ ।
ದೊಳಗೆ ಧನುವಿಡಿದೆಮ್ಮನಣಕಿಸಿ । ದಳವದೆಲ್ಲಿ ॥ ೧ ॥

ಕುರುಬರಲ್ಲಾ ಸೋದರರು ಮಖ । ನೆರಹಲೆಂದ್ಯೆತಂದ ರಾಯರ ॥
ಮರುಳು ಮಾಡಿದು ನಕ್ಕ ಪರಿಗಳ । ಮೆರಸು ನೋಡ ॥ ೨ ॥

ಮರೆಯಲಾರೆವು ಸಾವವರೆಗಾ । ಕರೆಯ ಬಂದಾಗೆನ್ನ ಗಣಿಸದೆ ।
ಮರಸಿದ್ದೆ ನಿಜವೆಂದು ತುಡುಕಿದ । ಸಿರಿಮುಡಿಯನೂ ॥ ೩ ॥

॥ ವಾರ್ಧಕ ॥

ಅಂಧರಾದಿರೆ ಹರಹರಾ ಮೌನಸಾಮ್ರಾಜ್ಯ ।
ಸಂದಿತೇ ಪತಿಗಳೈವರು ಮಾರಿಗಿತ್ತರಿದು ।
ಚಂದವೇ ನೀತಿಯೇ ಪೇಳಿರೆಂದೊರಲುತಿರೆ ಭೀಮನಾಲಿಸುತದರನು ॥ ೧ ॥ ೧೭೩ ॥

॥ ರಾಗ ಪಂತುವರಾಳಿ ಮಟ್ಟೆತಾಳ ॥

ಬಿಡು ದುಶ್ಶಾಸನಾ । ಕಡಿವೆ ಹಸ್ತವ । ನುಡಿಯೊಜಂಭವ ॥
ತರಿವೆಜಿಹ್ವೆಯ ॥ ಮೃಡ ಸಮಾನನ । ಭೀಮ ಪೌರುಷ ।
ಪೊಡವಿತಿಳಿವುದು । ತೋರಬೇಕದೂ ॥ ೧ ॥

ಅಣ್ಣನಾಜ್ಞೆಯ ಮೀರದಿರುತಿರೆ । ಗಣ್ಯವಿಲ್ಲದೆ । ಇನಿತುಗೈದಿರೆ ॥
ಬನ್ನಿ ಪಾಪಿಗ । ಳಿನ್ನು ಬಾಳ್ವಿರೆ ।
ಎನ್ನುತೊರೆದನು । ಸತಿಯ ಮುಂದಿರೇ ॥ ೨ ॥

॥ ವಾರ್ಧಕ ॥

ನೀರೆ ಬಿಡುದುಗುಡವಂ ಅಗ್ರಜನವಾಕ್ಯವಂ ।
ಮೀರದಿರೆ ನಿನ್ನಾಣೆಯಂಧಕನ ಕುವರರೀ ।
ನೂರುವರನೆನ್ನಯ ಗದಾದಂಡದೋಳ್ಬಡಿದು ಕಾಲನೂರ್ಗೊಪ್ಪಿಸುವೆನು ॥

Scanned by CamScanner

ಕ್ರೂರ ದುಶ್ಶಾಸನುರ ಬಗಿದು ರಕ್ತದೊಳದ್ದಿ ।
ವಾರಿಜಾಕ್ಷಿಯೆ ನಿನ್ನ ಸಿರಿಮುಡಿಯ ಕಟ್ಟಿಸುವೆ ।
ಮಾರವೈರಿಯ ಪಾದದಾಣೆ ಎನ್ನೀ ಭಾಷೆಗಖಿಳ ದೈವಗಳ್ ಸಾಕ್ಷಿಯು ॥ ೧ ॥

॥ ರಾಗ ಭೈರವಿ ಅಷ್ಟತಾಳ ॥

ಅಹಹ ಕೇಳ್ಳೈ ಕೌರವ । ಭೀಮನು ಗೈದ । ಬಹಳ ಭಾಷೆಯ ಭಾರವ ॥
ಸಹಸವೇನಿಂದ್ರಾದಿ । ಮಹಿತರು ಲಕ್ಷ್ಯವೆ । ಮಹಿಯೊಳೀತಗಳೆಣೆಯೇ ॥ ೧ ॥

ನೀತಿ ಧರ್ಮದ ಸೋಲವೂ । ಕ್ಷಮೆಯೊಳಿದ್ದ । ರೀತೆರನಾಯ್ತೆ ನೋವು ॥
ಸೂತಜ ನಿನ್ನನು । ಘಾತಿಸದಿರೆ ಕುಂತೀ । ಜಾತ ತಾನಲ್ಲೆಂದನು ॥ ೨ ॥

ವಿಗಡರ ಪಾಂಡವರೂ । ಗೆಲ್ದಾಳದೆ ಬಗೆಗುಂದಿ ಗಜರುವರು ॥
ಜಗಳವೊ ನೀತಿಯೊ । ತೆಗೆಸಾಕು ಭಾಷೆಯು । ತಗದೆಂದ ಸೌಬಲನೂ ॥ ೩ ॥

ನೀತಿ ತಪ್ಪಿದ ಮೋರೆಯ ॥ ಕುತಂತ್ರದೊ । ಆೀತೆರ ಮಾಳ್ಪ ಬಾಯ ॥
ಮಾತೇಕೆ ಹೊಯ್ದುನಾ । ಕೆಡಹುವೆನೆಂದನು । ಖಾತಿಯೊಳ್ಸಹದೇವನೂ ॥ ೪ ॥

ಇನಿತಾದ ಬಗೆಯ ನೋಡಿ । ಭೀಷ್ಮನುಗತಾ । ಕ್ಷನಿಗೆಂದ ಚಿಂತೆಗೂಡಿ ॥
ಜನಪನಿನ್ನವರು ಸ । ಜ್ಜನರ ಭಂಗಿಸಿ ವಂಶ । ಘನಕೀರ್ತಿಯಳಿಸುವರು ॥ ೫ ॥

ಸಲಿಸು ದ್ರೌಪದಿಯ ಚಿತ್ತ । ಕೇಳದೆ ಕುರು । ಕುಲವಿನಾಶಕರ ಮಾತ ॥
ತಿಳಿದು ಹಾನಿಯ ಕಳೆ । ದುಳಿಸುವಂಶವನೆನೆ । ಬಳಿಕ ದ್ರೌಪದಿಗೆಂದನೂ ॥ ೬ ॥ ೧೮೩ ॥

॥ ರಾಗ ತೋಡಿ ರೂಪಕತಾಳ ॥

ತಾಯೆ ದುಃಖಿಸಬೇಡ ಖಳರುಪಹತಿಗೆ ನೀ । ನೋಯದಿರೆನ್ನನು ನೋಡಿ ॥
ಈಯವಸ್ಥೆಯನೆಲ್ಲ । ಮರೆಯಬೇಕೆನುತೆಂದ । ಅಂಬಿಕಾತ್ಮಜನು ದ್ರೌಪದಿಗೇ ॥ ೧ ॥

ಮಾವನೀವೇಕೆ ಬಂದುಪಚರಿಸುವಿರೀಗ । ನೋವಾಯ್ತೆ ನಿಮ್ಮಯ ಮನಕೆ ॥
ಕೇವಲ ಪಾಪಿ ಎನ್ನಯ ಸೀರೆ ಸುಲಿವಾಗ । ಕಾವಕರುಣವಿಲ್ಲದಾಯ್ತೆ ॥ ೨ ॥

ದುಷ್ಟ ಪಾಪಿಗಳು ದುರ್ಮುಖರೆನ್ನ ಮಕ್ಕಳು ನಿಷ್ಠುರದವರು ವಂಚಕರು ॥
ಸಿಟ್ಟು ಮಾಡದಿರಂಥ । ನಾದೆನ್ನ ನೋಡಿ ನೀ । ಬಿಟ್ಟು ಕಳೆಯವ್ವ ಕ್ಲೇಶವನು ॥ ೩ ॥

ಮೆಚ್ಚಿದೆನಾ ನಿನಗಿತ್ತೆನು ವರಮೂರ । ನಿಚ್ಚೈಯೇನುಂಟದ ಕೇಳೂ ॥
ನಿಶ್ಚಯವಾಗಿ ನಾ ಸಲಿಸುವೆನೆನಲಾಗ । ಸಚ್ಚರಿತೆಯು ಪೇಳ್ದಳಂದು ॥ ೪ ॥

ವರವನೀವುದು ನಿಜವಾದರೆನ್ನಯ ಪ್ರಾಣ । ದರಸರ್ಕೈವರ ದಾಸ್ಯ ಬಿಡಿಸೀ ॥
ಕರುಣಿಪುದೆನೆ ಕೊಟ್ಟೆ ಬೇಡು ನೀನಿನ್ನೊಂದು । ವರವನೆಂದನು ಅಂಧ ನೃಪನು ॥ ೫ ॥

ನಲ್ಲರ್ಕೈವರಥನು ಶರಚತುರಂಗವ । ನೆಲ್ಲ ನೀವ್ಕರುಣಿಪುದೆನಲೂ ॥
ಫುಲ್ಲಲೋಚನೆ ಇತ್ತೆ ಇನ್ನೊಂದು ವರಬೇಡು । ಉಲ್ಲಾಸದಿಂದೀವೆನೆಂದಾ ॥ ೬ ॥

Scanned by CamScanner

ಧರ್ಮಸಂಮತವಾದ ನಮ್ಮ ಧರೆಯನಿನ್ನು । ನಿಮ್ಮೊಳು ಕೇಳ್ವೆನೆಂದೆನಲೂ ॥
ಸಮ್ಮತದಿಂದಂಥ ನೃಪನಿತ್ತ ದ್ಯೂತದಿ । ಧರ್ಮಜ ಸೋತುದನೆಲ್ಲಾ ॥ ೭ ॥ ೯೦ ॥

॥ ವಾರ್ಧಕ ॥

ಹೇ ನಿಶಾಕರ ವಂಶಜಾತನೀ ಲಾಲಿಸೈ ।
ಮಾನಿನೀ ಮಣಿಗೊಲಿದು ಧೃತರಾಷ್ಟ್ರದ್ಯೂತದೊಳು ।
ಭಾನುಸುತ ಸುತಸೋತ ಸಕಲ ಸಂಪದಗಳನು ತಾ ಬಿಟ್ಟುಕೊಟ್ಟು ಬಳಿಕಾ ॥
ಮಾನನಿಧಿ ಧರ್ಮಜಾದಿಗಳ ಸಂತೈಸಿ ಸ ।
ನ್ಮಾನದಿಂದುಪಚರಿಸಿ ಕಳುಹಲಿವರಖಿಳಜನ ।
ಸೇನೆ ಸಹಿತೈತಂದು ಪುರವರವ ಪೊಕ್ಕ ರಾವುತ್ಸಹದೊಳವರೆಲ್ಲರು ॥ ೧ ॥ ೯೧ ॥

॥ ಎರಡನೆಯ ಸಂಧಿ ॥

॥ ಮರು ಜೂಜು ॥

॥ ಭಾಮಿನಿ ॥

ಇತ್ತ ಹಸ್ತಿನಪುರದಿ ಕೌರವ ।
ನುತ್ತರಿಸುತಾದಿನವ ಮರುದಿನ ।
ಮಿತ್ರನುದಯದಿ ಕರೆಸಿ ಕರ್ಣಾದ್ಯರೊಳು ಪೇಳಿದನೂ ॥
ವ್ಯರ್ಥವಾಯಿತು ಕಾರ್ಯಕುಂತಿಯ ।
ಪುತ್ರರನು ಪಿತಬಿಟ್ಟು ಕಳುಹಿದ ।
ಮೃತ್ಯು ಮುಖದಿಂದುಳಿದರವರಿನ್ನೇನ ಪೇಳುವೆನೂ ॥ ೧ ॥ ೯೨ ॥

॥ ರಾಗ ಮೋಹನ ರೂಪಕತಾಳ ॥

ಎನಲು ಕೇಳುತಾಗಲೊಡನೆ । ಜನಪಗೆಂದ ಶಕುನಿ ನಿನ್ನ ।
ಜನಕ ನಮ್ಮ ಯತ್ನಗಳನು । ಹನನಗೈದನೂ ॥ ೧ ॥

ಕ್ರೂರಕೇಸರಿಗಳ ಪಿಡಿದು । ಸೇರಿಸಿದೆನು ಪಂಜರದೊಳು ।
ನಾರಿ ಬಿಡಿಸಿಕೊಂಡು ಪೋದಳ್ । ನೀರರೈವರಾ ॥ ೨ ॥

ಅತ್ತಡೇನು ಫಲವು ನಿನ್ನ । ಹೆತ್ತ ತಾತನೆಡೆಗೆ ಪೋಗಿ ।
ಆತ್ಮಹತ್ಯಗೈವೆನೆನಲು । ಮತ್ತೆ ಕರೆಸುವಾ ॥ ೩ ॥

ಬಳಿಕಲವರ ಸಕಲೈಶ್ವರಿಯ । ಸುಲಿದುಗೆಲಿದು ದ್ಯೂತದೊಳಗೆ ।
ಕಳುಹದಿರೆನು ವನಕೆ ಎನ್ನ । ಬಲುಮೆಯೀಕ್ಷಿಸು ॥ ೪ ॥

Scanned by CamScanner

ಖೂಳನೆಂದ ನುಡಿಗೆ ಕುರುನೃ । ಪಾಲ ಮನದಿ ಹರುಷ ತಾಳಿ ।
ಮೇಳ ಸಹಿತ ಬಂದ ಜನಕ । ನಾಲಯಕ್ಕೆ ತಾ ॥ ೫ ॥ ೧೯೭ ॥

॥ ಕಂದ ॥

ಪಿತನೆಡೆಗೈತಂದಾ ಕುರು ।
ಪತಿ ಪದಕೆರಗಿರಲು ಅಂಧನೃಪವರನಾಗಳ್ ॥
ಸುತನಂ ಪಿಡಿದೆತ್ತುತ್ತಲತಿ ।
ಹಿತದಿಂದಪ್ಪುತಲು ಪೇಳ್ದ ಬರವೇನೆನುತಂ ॥ ೧ ॥

॥ ರಾಗ ಮೋಹನ ಅಷ್ಟತಾಳ ॥

ಲಾಲಿಸು ತಾತ ಎನ್ನಯ ಮಾತ । ಖೂಳರೈವರ ಬಿಟ್ಟು ।
ಕಳುಹಿದೆ ನೀನು ॥ ಪೇಳಲಿನ್ನೇನು । ಕುಂತಿ ಸುತರನ್ನು ।
ಪಾಲಿಸಿದೆಯಲ್ಲ ಇನ್ನು । ನುಡಿದು ಫಲವೇನು ॥ ಲಾಲಿಸು ॥ ೧ ॥

ಖತಿಯೊಳ್ಕಪಿಸಿದ । ಕೆನಗೆ ದ್ರುಪದನ ।
ಸುತೆಯ ಪರಸಿ ಬಿಟ್ಟುಕೊಟ್ಟೆ ಮನ್ನಿಸಿ ॥
ಸುತರು ನಾವಲ್ಲ । ಕೃಪೆಯೆಮ್ಮೊಳಿಲ್ಲ ।
ಸತತ ಪಾಲಿಸು ಪಾಂಡು । ಸುತರ ನೀನೆಲ್ಲಾ ॥ ಲಾಲಿಸು ॥ ತಾತಾ ॥ ೨ ॥

ಆಗರುವರು । ಭೀಮ ಪಾರ್ಥರು । ನೀಗಿ ಕಳೆವರು ।
ನಮ್ಮ ಪ್ರಾಣವುಳಿಸರು । ಪೋಗುವೆ ನಾನು । ಬಾಳಲಾರೆನು ।
ಈಗಲಾಜ್ಞೆಯ । ಬೇಗ ಪಾಲಿಸೆನ್ನಯ್ಯಾ ॥ ಲಾಲಿಸು ತಾತ ॥ ೩ ॥ ೨೦೦ ॥

॥ ರಾಗ ಹನುಮತೋಡಿ ಏಕತಾಳ ॥

ತರಳ ಕೌರವನೆಂದ । ಪರಿಯ ಲಾಲಿಸು ಕಂದಾ ।
ಧರಣಿಪಾಲಕನಂದಾ । ದುರುಳಗಿಂತೆಂದಾ ॥
ಸರಿಯಲ್ಲವಿದು ಕುಂತಿ । ತರಳರಿಗೆ ಶ್ರೀ ಕಾಂತ ।
ಕರುಣಿಸದಿರನೆಂಬು । ದರಿತೆಯಲ್ಲ ॥ ತರಳ ॥ ೧ ॥

ಪೋಗದಿರ್ನಿನ್ನನು । ಅಗಲಿರಲಾರೆನು ।
ಬೇಗದಿಂದುಸುರೆಲ್ಲ । ಮನದಾಲೋಚನೆಯ ॥
ಆಗುಹೋಗುಗಳೆಲ್ಲ । ನಾಗಶಯನ ಬಲ್ಲ ।
ರೋಗಿಗೌಷಧ ಸೊಗ । ಸಲ್ಲಸುಳ್ಳಲ್ಲಾ ॥ ತರಳ ॥ ೨ ॥

ಪುರಕೆ ಪೋದ ಪಾಂಡು । ತರಳಾರ ಮುದಗೊಂಡು ।
ಕರಸಿಕೊಡಯ್ಯ ತಂದೇ । ಕರುಣಾದೊಳಿಂದೇ ॥ ॥
ಮರಳಿದ್ಯೂತದಿ ಜೈಸಿ । ಧರಣಿಯನ್ನೊಶಗೊಳಿಸಿ ।
ಭರದಿಂದಟ್ಟುವೆ ನಾನು । ಕಾಡಿಗಿನ್ನೇನು ॥ ೩ ॥ ೨೦೪ ॥

Scanned by CamScanner

॥ ಭಾಮಿನಿ ॥

ಸಿಂಧುವಸನಾಧೀಶ ಕೇಳ್ಮಗ ।
ನೆಂದ ಮಾತಿಂಗೊಪ್ಪಿತಾ ಯಮ ।
ನಂದನನ ಕರೆತರಲು ಕಳುಹಿದ ಪ್ರಾತಿಕಾಮಿಕನಾ ॥
ಬಂದವನು ವಂದಿಸುತ ನಿಮ್ಮಯ ।
ತಂದೆ ಕರೆತಾರೆಂದು ಕಳುಹಿದ ।
ನೆಂದೆನಲು ಕೇಳ್ದೆಲ್ಲರಾಕ್ಷೇಪಿಸಲು ಯಮಸೂನು ॥ ೧ ॥

॥ ವಾರ್ಧಕ ॥

ಬೊಪ್ಪ ಬರಹೇಳಿ ಕಳುಹಿದ ಮೇಲೆ ನಾನದರ ।
ತಪ್ಪಿನಡೆವವನಲ್ಲವೆಂದನುಜರೊಡವೆರೆದು ।
ಬಪ್ಪ ಕೇಡನು ಬಗೆಯದೈತಂದು ಗಜಪುರಿಗೆ ಧೃತರಾಷ್ಟ್ರ ಭೂಪಾಲನು ॥
ಇಪ್ಪಮನೆಯನು ಪೊಕ್ಕು ಪೊಡಮಡಲ್ಕಂಡು ತೆಗೆ ।
ದಪ್ಪುತಾನಂದದಿಂದುಪಚರಿಸುತಿರಲಾಗ ।
ನಿಮ್ಮಪ್ಪನಯ್ಯನಾತಾತನಿಂತೆಂದನವರೊಡನೆ ಕೇಳ್ ಭೂವರೇಣ್ಯ ॥ ೧ ॥ ೨೦೬ ॥

॥ ರಾಗ ಎರಕಲ ಕಾಂಭೋಜಿ ತ್ರಿವುಡೆತಾಳ ॥

ಲಾಲಿಪುದೆಲೆ ತಾತ । ಬಂದು ಈ ಕ್ಷಣದೂತ ।
ಪೇಳಿದ ನೀ ಬರ । ಹೇಳಿದೆ ಎಂದೂ ॥
ಕೇಳಿ ನಾ ತಳುವದೆ । ಬಂದೆ ನಿನ್ನೆಡೆಗಿಂದು ।
ಪೇಳೇತಕೆನ್ನನು । ಕರಸಿದೆಯೆಂದೂ ॥ ಲಾಲಿಪು ॥ ೧ ॥

ಕಂದನಾಲ್ದಿನ ಸುಖ । ದಿಂದಿರ್ದು ಪೋಗುವು ।
ದೆಂದು ಬರಲು ಪೇಳ್ದೆ । ನಲ್ಲದಿನ್ನೇನೂ ॥
ನೊಂದಿರೆನ್ನಯ ಖೂಳ । ನಂದನರಿಂದದ ।
ರಿಂದಿರಿ ಸುಖ ದ್ಯೂತ । ದಿಂದ ನೀವಿಲ್ಲೀ ॥ ಕಂದ ॥ ೨ ॥

ಇಂತುಪಚರಿಸಿ ಕೃ । ತಾಂತ ಸುತಾದ್ಯರ ।
ತಾಂ ತಳುವುದೆ ಕರೆ । ತಂದನಾ ಸಭೆಗೇ ॥
ಸಂತಸದಿಂದಲ್ಲಿ । ಕುಳಿತಿಲಾಗಲಾ ।
ಕೌಂತೇಯನೊಳು ಪೇಳ್ದ । ಸುಬಲ ಸಂಜಾತ ॥ ೩ ॥

॥ ರಾಗ ಪೂರ್ವಿಕಲ್ಯಾಣಿ ಅಷ್ಟತಾಳ ॥

ಕೇಳಯ್ಯಾ । ಧರ್ಮಜಾತನೆನ್ನುಕ್ತಿಯಾ ॥ ಕೇಳಯ್ಯಾ ॥ ಪ ॥
ಮೇಲನುದ್ಯೂತಕೈತಂದೆಯ ಚೆನ್ನಾಯ್ತು ॥ ಕೇಳಯ್ಯಾ ॥ ಅ । ಪ ॥

Scanned by CamScanner

ಇನ್ನೊಮ್ಮೆ ಬೇರೊಂದು ಬಗೆಯ ಜೂಜಾಡುವ ।
ಅನ್ನೆಗಸೋತವ । ಹನ್ನೆರಡಬ್ದವ ॥
ರಣ್ಯದಿಚರಿಸಬೇಕು । ಅಜ್ಞಾತ ಮ । ತ್ತಿನ್ನೊಂದು ವರ್ಷಸಾಕು ।
ಗುಪ್ತದೊಳಿಹು । ದನ್ನೆಗವರಿತರೆ । ಮುನ್ನಿನಂತೆಸಗುವುದು । ಕೇಳಯ್ಯಾ ॥ ೧ ॥

ಇಂತು ನಿರ್ಣಯ ನಿಮ್ಮದಾದರೆಲೇಸು । ಮಾ ।
ಕಾಂತನ ದಯದೊಳ । ಗೆಂತಾವು ಚರಿಸುವೆ ॥
ಚಿಂತೆಯಾಕೆನುತವನು । ಸಂಪೂರ್ಣ ಸ್ವ । ತಂತ್ರದೈಶ್ವರಿಯವನು ।
ಲೆತ್ತಕೆ ಹೂಡಿ । ನಿಂತಿರೆ ವಿದುರ ಭೀಷ್ಮಾದ್ಯರೀಕ್ಷಿಸುತಲೆ ॥ ೨ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಆಗದಿದು ದುರ್ವ್ಯಸನವೆಂದರು । ಆಗರುವ ಗುರು ವಿದುರರಾಶತ ।
ಯಾಗನಾತ್ಮಜ ಭೀಮನುಸುರಿದ । ರಾಗದೆಂದೂ ॥ ೧ ॥

ಕೇಳದಿವರ ಹಿತೋಕ್ತಿಯನು ಭೂ । ಪಾಲ ಸೌಬಲಗೆಂದನೊಡ್ಡವ ।
ನಾಲಿಸಿದೆನೊಪ್ಪಿದೆನು ನೀನಾ । ಡೇಳೆನುತ್ತ ॥ ೨ ॥

ಆಡಿದೊಂದೇ ಆಟದಲಿ ಹೋಗಾಡಿದನು ಧರ್ಮಜನು ರಾಜ್ಯವ ।
ಮೋಡಿ ಯಿಂ । ದಲಿ ಗೆಲಿದ ಶಕುನಿಯು । ಆಡಲೇನು ॥ ೩ ॥

ರಾಯ ಧರ್ಮಜ ಸೋತನೈಕುರು । ರಾಯಗೆಲಿದನುಧರೆಯು ನಮಗಿ ।
ನ್ನಾಯಿತೆನುತೊದರಿದನು ಖಳ ತಾ । ಬಾಯಬಿಟ್ಟು ॥ ೪ ॥ ೨೧೫ ॥

॥ ರಾಗ ಪೂರ್ವಿಕಲ್ಯಾಣಿ ಅಷ್ಟತಾಳ ॥

ಬಲುಚಂದವಾಯ್ತಯ್ಯ । ಕಾರ್ಯಕ್ಕೆಗೂಡಿತು ।
ಬೆಳಗಿತೆಮ್ಮಭಿಮಾನ । ಎಲೆ ಕೌರವೇಶ್ವರ । ಅಳುಕುವುದೇತಕಿನ್ನು ॥
ನಿರ್ವ್ಯಾಕುಲ । ದಲಿ ರಾಜ್ಯಭಾರವನು । ಮಾಡುವುದೆಂದು ।
ತಿಳುಹಲು ಕೌರವ । ಗೆಲವಿನಿಂದೆದ್ದನು ॥ ಕೇಳಯ್ಯಾ ॥ ೧ ॥

॥ ರಾಗ ಖಮಾಚ್ ಏಕತಾಳ ॥

ಏನೆಲ ಯಮಸುತ । ಮುನ್ನಗಮನವೆತ್ತ ।
ಕಾನನ ವಾಸಕಾಗಿ ಸಾಗಲಾಯ್ತೇ ॥
ದೀನರಾದಿರೆ ನಮ್ಮಿ । ಸ್ಥಾನದಿ ಬಾಳ್ವಿರೆ ।
ಮಾನವಂತರ ಭಾಷೆದೊಡ್ಡಿತಲ್ತೇ ॥ ಏನೆಲ ॥ ೧ ॥

ಬೆರಳಲೇಡಿಸುತೆಂದ ॥ ದುರುಳ ದುರ್ಯೋಧನ ।
ತೆರಳಲಕ್ಕುದಾಯವ । ಭಾಷೆ ಪೂರೈಸೀ ॥
ತಿರುಕುಳಿಗಳಿಗಿಂತಾ । ಭರಣಗಳೇಕೆಯುಕ್ತ ।
ವಿರುವದ ಪಡಕೊಂಡು । ಪೋಗಿರತ್ತ ॥ ಏನೆಲಾ ॥ ೨ ॥ ೨೧೮ ॥

Scanned by CamScanner

॥ ವಾರ್ಧಕ ॥

ಮರುತಸುತನಾಮೊದಲೆಯ ಮಾತ ಸೈರಿಸದೆ।
ಕೆರಳುತೆಂದದಂ ಗದೆಯತಿರುಹಿ ಪಾಪಾತ್ಮರಿರ।
ಕರೆಸಿ ಧಾರ್ಮಿಕರ ಕಪಟ ದ್ಯೂತದಿಂಗೆಲಿದು ನೂಕುವಂತಾಯ್ತೆ ಭಳಿರೆ॥
ನೆರಹುವೆವು ಭಾಷೆಯನು ಖಳ ನೃಪನ ಬಳಗವಂ।
ತರಿದು ಕೌರವನಿವನ ಘಾತಮಂಗೈವೆ ಭಾ।
ಪುರೆ ಬನ್ನಿರೆಂದು ಗಜರಿದನಾಗ ಕಂಡು ಸಂತೈಸಿದಂ ಯಮಜಾತನು ॥ ೧ ॥ ೨೧೯ ॥

॥ ಭಾಮಿನಿ ॥

ತರುಣಿ ದ್ರೌಪದಿ ಸಹಿತ ಪಾಂಡವ।
ರಿರದೆ ರತ್ನಾಭರಣಗಳ ತೆಗೆ।
ದೆರೆದು ಹಾಕಿದರಂದು ಪಿತನಡಿಗೆರಗಿದರುನೊಂದು॥
ಗಿರಿವನಗಳನುಚರಿಸಿ ದೇವರ।
ಕರುಣೆಯಿಂದವಧಿಯನು ಮುಗಿಸುತ।
ಪುರವ ಪೊಗುವೆವು ಕಳುಹು ಒಲವಿನೊಳೆನಲು ತಕ್ಕೈಸಿ ॥ ೧ ॥ ೨೨೦ ॥

॥ ರಾಗ ಸಾಂಗತ್ಯ ರೂಪಕತಾಳ ॥

ಹರಹರ ನೇಮವನೆಂತೀವೆ ಗಿರಿವನ। ಚರಿಸುವಿರೆಂತೊ ಬಾಲಕರು॥
ಪರಮ ಸಾಧ್ವಿಯು ಸಖಿಯರ ಕೂಡಿ ಮನೆಬಿಡ। ದಿರುವಳು ಕಾಡೊಳೆಂತಿಹಳೊ ॥ ೧ ॥

ಇಂತಾಯಿತೆಮ್ಮ ನಿಮ್ಮಯ ಸುಕೃತ ದುಷ್ಕೃತ। ದಂತಿನ್ನು ಪೇಳಲೇನಿಹುದು॥
ಪಂಥದೊಡನೆ ಸುಖದುಃಖವನುಣಬೇಕು। ಸಂತವಿರೆಂದನು ಯಮಜ ॥ ೨ ॥

ಚದುರರೈವರು ಮಾತೆ ಕುಂತಿಯ ವಿದುರನ। ಸದನದಿ ಬಿಟ್ಟು ಗುರುಜನರ॥
ಪದಕೆ ವಂದಿಸಿ ನೇಮವನುಗೊಂಡು ಪೊರಟರು। ಸುದತಿ ದ್ರೌಪದಿ ಸಹಿತಂದು॥

॥ ವಾರ್ಧಕ ॥

ಧರೆಯರಸ ಕೇಳಿಂತು ಸಂತೈಸುತನಿಬರಂ।
ತೆರಳಿದರ್ ಚಂದ್ರಕುಲದೀಪಕರ್ ದುರ್ಜನರ।
ನೆರೆ ಬಿಟ್ಟು ಸಾಧುಕುಲದೊಡನೆ ಗಿರಿವನದೊಳಾದರು ಬಾಳ್ವದಿನವೆ ಲೇಸು॥
ಭರತಖಂಡವ ಬೆಳಗಿ ಸತ್ಯಧರ್ಮದಿ ತೊಳಗಿ।
ಮೆರೆವರಿವರೆಂದೆನುತ ಸಾರಿದರು ಧೌಮ್ಯಾದಿ।
ಧರೆಯಮರರಂ ಕಂಡು ನುಡಿಸಿದಂ ಹಿರಿಯನಾಜ್ಞೆಯೊಳಂದು ಕಲಿಭೀಮನು ॥ ೧ ॥

Scanned by CamScanner

॥ ರಾಗ ಸಾವೇರಿ ರೂಪಕತಾಳ ॥

ನಿಲ್ಲಿರಿ ದ್ವಿಜರೆ ನೀವೆಲ್ಲರೊಂದಾಗಿ ।
ಎಲ್ಲಿಗೆ ಪಯಣ ಬರುವದಯೋಗ್ಯ ಹೋಗಿ ॥ ಪ ॥
ಪೂರ್ವ ಜನ್ಮದ ಪುಣ್ಯಪಾಪ ಸಂಚಿತವೊ ।
ಸಾರ್ವವೀತೆರ ಬ್ರಹ್ಮಬರಹ ಮೀರುವೆವೊ ॥
ಊರ್ವೀಶರಿಗೆ ಮಾತು । ಹಿರಿದವಧಿಯನು ತೀರಿಸಿ ಬಹೆವೈಸೆ ।
ಮರಳಿ ಬೇಡುವೆನು ॥ ೧ ॥

ಏಕೊ ನೀವೆಮ್ಮನಡ್ಡೈಸುವೆ ಭೀಮ ।
ಸಾಕು ದುರ್ಜನ ಸಂಗ । ಮಾಳ್ಪುದೆರಾಮಾ ॥
ಬೇಕು ಸಜ್ಜನ ಕೂಟ ನಿಮ್ಮಂತೆ ನಾವು ।
ಆ ಕಾಡೊಳಿಹೆವೆಷ್ಟು ತಡೆದರು ಬಹೆವು ॥ ೨ ॥

ಹರಹರ ನಮ್ಮ ಧರ್ಮಕೆ ಕುಂದು ಬಂತೆ ।
ಹೊರೆವುದೆಂತೀ ವಿಪ್ರನಿವಹವ ಮುಂತೆ ॥
ಹರಿಕೃಷ್ಣ ಶರಣು ಸತ್ಯವ ಪಾಲಿಸೆಂದು ।
ಮರುಗಿದ ಯಮಜಗೆಂದನು ಧೌಮ್ಯನಂದು ॥ ೩ ॥ ೨೨೩ ॥

॥ ಆರ್ಯಾ ಸವ್ಯಾ ॥

ಕಾಲಾತ್ಮಜ ನಾ ಪೇಳ್ವೆ ಭಜಿಸು ಬುಧ ।
ಜಾಲವ ಪೊರೆವರೆ ನೀ ರವಿಯ ॥
ಮೇಲಕ್ಷಯ ಪಾತ್ರೆಯನೀವನು ನಿ ।
ಮ್ಮೇಳಿಗೆಗೊದಗುವುದಿದು ಖರೆಯು ॥ ೧ ॥

ಎನಲಾ ಧರ್ಮಜ ವಿಮಲಜಲದಿ ಮ ।
ಜ್ಜನಗೈದರ್ಘ್ಯವ ತಾ ಪಿಡಿದು ॥
ಇನನಿಂಗಿತ್ತೊಮ್ಮನದೊಳು ಸ್ಮರಿಸಿದ ।
ದಿನಮಣಿ ತಾನತಿ ಮೆಚ್ಚಿದನು ॥ ೨ ॥

ಬಂದಕ್ಷಯ ಪಾತ್ರೆಯನಿತ್ತನು ಬುಧ ।
ವೃಂದವನುಣಲಿಕ್ಕಿದ ಬಳಿಕ ॥
ನಿಂದು ನಿಜೇಶರ ಮೇಲುಣುವುದು ಸತಿ ।
ಯೆಂದು ನಭವ ಸೇರ್ದಾ ದಿನಪ ॥ ೩ ॥

ಸೂರ್ಯನಮತವಂ ಶೂರರು ನಡೆಸುತ ।
ಸಾರಿದರತಿ ಭರದೊಳುವನಕೆ ॥
ಯಾರಿಗು ಹೊಗಲರಿದಾಗಿಹಕಾಮ್ಯಕ ।
ದಾರಣ್ಯವ ವಹಿಲದಿ ಸೇರೆ ॥ ೪ ॥ ೨೩೦ ॥

॥ ರಾಗ ಕಾಂಭೋಜಿ ಝುಂಪೆತಾಳ ॥

ಪೃಥ್ವಿಪತಿ ಕೇಳಿತ್ತ । ದೈತ್ಯಾಂತಕನ ದಯದಿ ।
ಸತ್ಯದಿಂ ಪಾಂಡುಜರು ಮುದದಿ ॥
ಪೃಥ್ವಿಯಮರರನು । ಸಂತೃಪ್ತಿಪಡಿಸುತಲಿರ್ದ ।
ಲತ್ಯಧಿಕಭಾರವಣೆಯಿಂದ ॥ ೧ ॥

ಮೂರ್ದಿನಗಳಿರಲಲ್ಲಿ । ಗಿರ್ದ ಬಕನಣ್ಣನಾ ।
ಗೀರ್ದಕೆಮ್ಮೀರನೆಂಬಸುರ ॥ ಮೀರ್ದಕೊಮ್ಮೆಯೊಳಡವಿ ।
ಸಾರ್ದುಚರಿಸಲು ಮೂಗ । ಸೇರ್ದುದೈನರ ವಾಸನೆಗಳು ॥ ೨ ॥ ೨೩೩ ॥

॥ ರಾಗ ಕಲ್ಯಾಣಿ ಅಷ್ಟತಾಳ ॥

ಆರ್ರೈಬಂದವರು । ಈ ಗಹನಕೀ । ಗಾರ್ರೈ ಬಂದವರು ॥ ಪ ॥
ಭೋರನೆನ್ನೀಮೂಗನಡರಿದೆ । ಭೂರಿ ನರವಾಸನೆಯು ಘಮಘಮ ।
ಕ್ರೂರ ವ್ಯಾಘ್ರನ ಭಾರಣೆಯವಿಗೆ । ಪಾರಣೆಗೆ । ತುತ್ತಾದ ಕುರಿಗಳು ॥ ೧ ॥

ನರರ ಮಾಂಸವ ಮೆಲದೆಹಲದಿನ ॥
ಸರಿದವೀದಿನ ಹರನ ದಯದಲಿ । ದೊರಕಿತಿಂದಾಹಾರವಹಹ ।
ಬರುವರಿಲ್ಲ ಬೆದರಿತಾನೆ ॥ ೨ ॥

ಮಿದುಳನೆಣಗೊಬ್ಬುಗಳ ಕೊರೆದು ।
ಎದೆಯ ಮೂಳೆಯತುಪ್ಪದಿಂದ । ಕೆದರಿ ಹುರಿದು ತಿಂಬೆನೊಮ್ಮೆ ।
ಕುದಿವ ಹಸುವೆಯಣಗಿತೇಗ್ವೆ ॥ ೩ ॥

॥ ಕಂದ ॥

ನಿಂದಾ ದಾನವನಂ ಕಂ ।
ಡಂದಾ ವಿಪ್ರೌಘ ಬೆದರುತ್ತಿರಲ್ಕಾಗಂ ॥
ಬಂದಾ ಧೌಮ್ಯಂತಾದಿ ।
ಗ್ರಂಥನ ಗೈಯುತಲಿ ಪೇಳ್ದ ಭೂಸುರತತಿಗಂ ॥ ೧ ॥

॥ ರಾಗ ಸೌರಾಷ್ಟ್ರ ತ್ರಿವುಡೆತಾಳ ॥

ಯಾಕೆ ಬೆದರುವೆರ್ರೈದ್ವಿಜೋತ್ತಮ । ರೀಕುಠಾರನ ಗೆಲುವರೆಮ್ಮನು ।
ಸಾಕಿದವನಿಪರೆಂದ ಧೌಮ್ಯ ವಿ । ವೇಕದಿಂದ ॥ ೧ ॥

ಆರು ನಿಮ್ಮಗಳರಸ ವಿಪಿನವ । ಸೇರಿದೇಂದೊರೆ ಕಾರ್ಯವೆನೆ ಬುಧ ।
ವಾರವೆಂದುದು ಪಾಂಡವರು ರಣಶೂರರ್ರೈಸೇ ॥ ೨ ॥

ಹಗೆಗಳೇ ಬಲುನರರ ಕೆಡೆಹೊ । ಯ್ದುಗಿದು ಮಾಂಸಾದಿಗಳ ತಿಂಬೆನು ।
ಸೊಗದಿ ಬಾಳುವೆ ಬಳಗದೊಡನೆಂ । ದಗಡು ದನುಜ ॥ ೩ ॥

Scanned by CamScanner

ಅನಿತರೊಳಗರ್ಜುನನು ತನ್ನಯ । ಧನುವರ್ಘೋವಡೆ ಗೈಯುತಿರೆ ಕಂ ।
ಡನಿಲ ಸುತನಡಹಾಯ್ದು ನುಡಿದನು । ದನುಜನೊಡನೆ ॥ ೪ ॥

ಘಡದುರುಳನಕ್ತಂಚರಾಧಮ । ಕಡುಹ ತೋರ್ದೆಯಬುಧರ ತಂಡದಿ ।
ಮಡುಹಿ ನಿನ್ನನು ಮರುಳುಗಳಿಗುಣ । ಬಡಿಪೆ ನೋಡ ॥ ೫ ॥

ಎಲವೊ ಮನುಜಾಧಮನೆ ನಿನ್ನಯ । ತಲೆಯನರಿದೀದ್ವಿಜ ಸಮೂಹವ ।
ನಲಸದೀಕ್ಷಣ ತಿಂಬೆನೊಂದರೆ । ಘಳಿಗೆಯೊಳಗೆ ॥ ೬ ॥

ಕೇಳೆಲವೊ ಖಳಕುನ್ನಿ ಮೊದಲೊಳು । ಮಲ್ಲ ಸಾಹಸದಿಂದ ದನುಜರು ।
ಮುಳಿದುಯೆನ್ನೊಳು ಧುರವಗೈಯುತ । ಅಳಿದುದರಿಯೊ ॥ ೭ ॥

ಅನುಜನಾಗಿಹ ಬಕನ ನಿನ್ನಯ । ತನುವ ಸೀಳಿದು ತೆಗವೆನೀಕ್ಷಣ ।
ಎನಲು ಗಹಗಹಿಸುತ್ತ ಮಾರುತ । ತನಯ ನುಡಿದಾ ॥ ೮ ॥

ದನುಜ ಕೇಳ್ನಿ । ನ್ನನುಜನೆನ್ನಯ । ತನುವಿನೊಳಗಿಲ್ಲಾತಯಮಪ ।
ಟ್ಟಣವ ತೋರ್ಪೆನು ಕ್ಷಣದಿಯೆನ್ನುತ । ಘನತೆಯಿಂದಾ ॥ ೯ ॥ ೨೪೬ ॥

॥ ರಾಗ ಭೈರವಿ ಏಕತಾಳ ॥

ವಿಧವಿಧದಿಂದೆಮ್ಮವರ । ಬಲು । ಮದದಲಿ ಸದೆದೆಯ ಪೋರ ।
ಮುದದಿಂದೆನ್ನೊಳು ಸೆಣಸು । ನಿಲು । ಕದನಕೆ ಸಾಹಸ ಮೆರಸು ॥ ೧ ॥

ನಿನ್ನೊಡನೇ ಸದು ಸಮರ । ಬಲು । ಹೆನ್ನೊಡನಿರ್ದಡೆ ತೋರ ॥
ಮುನ್ನಿನ ಸ್ಥಿತಿಯನು ತಿಳಿದು । ಧುರಕೆನ್ನೊಳು ನಿಲುನಿಲು ಮುಳಿದು ॥ ೨ ॥

ಮಾರುತಭವನೆಂದುದನು । ಆ । ಕ್ರೂರ ದನುಜ ತಿಳಿದದನು ॥
ಘೋರನೆ ವೃಕ್ಷದೊಳ್ ಪೊಯಿದ । ಭೀ । ಮೋರಂತೆಲ್ಲವತರಿದಾ ॥ ೩ ॥

ಧುರದೊಳು ಸರಿಸಮನಾಗಿ । ಬರೆ । ಬರಲವನಸುವನು ನೀಗಿ ॥
ಧರೆಯೊಳು ಚೆಂಡಾಡಿದನು । ಮಹ । ಹರುಷದಿ ಕುಣಿದಾಡಿದನು ॥ ೪ ॥ ೨೫೦ ॥

॥ ಭಾಮಿನಿ ॥

ಬುಧರು ಕಾಣುತ ಖಳನ ಶವವನು ।
ಮುದದಿ ಮರುತಾತ್ಮಜನನೆಲ್ಲರು ।
ವಿಧವಿಧದಿ ಪೊಗಳಿದರು ನಮ್ಮನು ಕಾಯ್ದೆ ನೀನೆನುತಾ ॥

॥ ವಾರ್ಧಕ ॥

ಅಡವಿಯೊಳು ಸುಸ್ಥಳವ ಹುಡುಕಿ ಪರ್ಣಾಶ್ರಮವ ।
ನೊಡನೆರಚಿಸುತ ವಿಪ್ರರಾಶೀರ್ವಾದದಿ ಹರಿಯ ।
ಕಡುದಯದೊಳೆಸೆದರಾ ಪಾಂಡವರು ಕಾಡೆ ನಾಡಾಗಿ ಸುಖ ಸಂಪದದೊಳು ॥

Scanned by CamScanner

॥ ಕಂದ ॥

ವನವಾಸಂ ಕಳೆಯುತ್ತಂ ।
ಅನುನಯ ಮಂತೊರೆದು ಕೌರವಾದ್ಯರ ಮುರಿದುಂ ॥
ಅನಘರ್ ಪಾಂಡವರೆಸದರ್ ।
ಮನುಮಥ ಪಿತನೊರೆದ ರೀತಿಯಾಳಿದ ಯಮಜಂ ॥ ೧ ॥

॥ ವಾರ್ಧಕ ॥

ಶರಧಿವಸನಾಧೀಶ ಲಾಲಿಸ್ಸೆ ಪಾಂಡವರು ।
ತರುಣಿ ದ್ರೌಪದಿ ಸಹಿತ ತೆರಳಿವನದೊಳಗೆ ಹ ।
ನ್ನೆರಡಬ್ದವನು ಹರಿಯ ಕರುಣದಿಂದುತ್ತರಿಸಿ ಬಂದು ಮತ್ಸ್ಯನ ಮನೆಯೊಳು ॥
ವರುಷವಜ್ಞಾತ ಕಳೆದುಳಿದು ಸಂಧಿಯ ಮುರಿದ ।
ದುರುಳರನು ಸಂಹರಿಸಿ ಪರಮ ಸಂತೋಷದಿಂ ।
ದರಸ ಧರ್ಮಜನು ಗಜಪುರಿಯ ಪಾಲಿಸುತಿರ್ದ ಮರುತಜಾದ್ಯರು ಸಹಿತಲಿ ॥ ೧ ॥

॥ ಭಾಮಿನಿ ॥

ತರಳೆ ದ್ರೌಪದಿ ಭಕ್ತಿಗೊಲಿದಾ ।
ಹರಿಯು ಕೃಪೆಯಿಂದಕ್ಷಯಾಂಬರ ।
ಕರುಣಿಸಿದ ಸತ್ಕಥೆಯನಿದನೀ ಧರೆಯ ಸಜ್ಜನರು ॥
ತರಣಿಯುದಯದಿ ಪೇಳೆಕೇಳ್ದರೆ ।
ಪರಿವುದಘಕುಲವೆಂದು ಯೋಗೀ ।
ವರನು ಜನಮೇಜಯ ನೃಪಾಲಂಗೊಲಿದು ಪೇಳಿದನು ॥

। ಆರತಿ ಪದ ॥

ವೀರಾಧಿವೀರ ಧರ್ಮಜಗೆ ।
ಭೂರಿವಿಬುಧ ಕುಲಪಾಲನಿಗೆ । ಶ್ರೀ ರಮಣನ ಪಾದಾಂಬುಜಮಧುಪಗೆ ।
ಸಾರಗುಣಾನ್ವಿತ ಶಶಿಕುಲದೀಪಗೆ । ನಾರಿಯರೆಲ್ಲರು ಪಾಡಿ ಶೋಭಾನವ ॥
ಮೇರುವೆಯಾರತಿಯಾ ಬೆಳಗೀರೆ ॥ ಶೋಭಾನೆ ॥ ೧ ॥ ೨೫೪ ॥

॥ ಮಂಗಲ ಪದ್ಯ ॥

॥ ರಾಗ ಮೋಹನ ಏಕತಾಳ ॥

ಮಂಗಲನಮರಾಸುರನುತಗೆ । ಮಂಗಲನುತ ಮತ್ಸ್ಯಾದ್ಯವತಾರಿಗೆ ।
ಸಂಗರ ಕಲಿಮಲ ಪಾಪವಿನಾಶಗೆ ॥
ರಂಗನುದಿತಕಣಿಪುರ ಶ್ರೀಕೃಷ್ಣಗೆ । ಮಂಗಲಾರತಿಯ ಬೆಳಗಿದರು ॥ ೧ ॥

ಮಂಗಲಂ ಯದುಕುಲ ತಿಲಕನಿಗೇ । ಜಯ ।
ಮಂಗಲಂ ಮೋಹನ ಮೂರುತಿಗೇ ॥
ಅಂಗಜಪಿತ ಶ್ರೀರಂಗನಿಗೇ । ಜಯ । ಮಂಗಲಾಂಗ ಶ್ರೀಕೃಷ್ಣನಿಗೆ ॥
ಮಂಗಲಂ ಜಯ ಮಂಗಲಂ ॥ ೧ ॥ ಪದ್ಯ ೨೫೫ ॥

ಅಂತು ಸಂಗಿಕ್ಕೆ ಪದ್ಯ ೨೫೫ ॥ ಇನ್ನೂರ ಐವತ್ತೈದಕ್ಕೆ ಸಮಾಪ್ತಿ ॥

॥ ಶ್ರೀ ಶ್ರೀ ಶ್ರೀ ॥

ಪಾತ್ರಗಳ ವಿವರ

೧. ಧರ್ಮರಾಯ
೨. ಭೀಮ
೩. ಅರ್ಜುನ
೪. ನಕುಲ
೫. ಸಹದೇವ
೬. ದ್ರೌಪದಿ
೭. ಕೌರವ
೮. ಶಕುನಿ
೯. ಕರ್ಣ
೧೦. ದುಶ್ಶಾಸನ
೧೧. ಭೀಷ್ಮ
೧೨. ವಿದುರ
೧೩. ಧೃತರಾಷ್ಟ್ರ
೧೪. ವಿಕರ್ಣ
೧೫. ಪ್ರತಿಕಾಮಿಕ
೧೬. ಗಾಂಧಾರಿ
೧೭. ಸೂರ್ಯ
೧೮. ಧೌಮ್ಯರು, ಶಿಷ್ಯರು
೧೯. ಕಿಮ್ಮೀರ

Scanned by CamScanner